

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ
Editor : MARUTI BASAVANTAPPA HOSAMANI
Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ
RNI REG No. : KARKAN/2016/75068

SIHI KAHI
KANNADA DAILY MORNING
BAGALKOT

Volume : 06 | Issue : 227 | Saturday 18-05-2024 | E-mail : maruti.b.hosamani76@gmail.com | Page: 4 | Price : Rs. 1/-


## ಕಾದು ಬಾಣಲಿಯಂತಾಗಿದ ಧರೆಗೆ ಮಳೆಯ ಸಿಂಚನ: ಮುಂಗಾರು ಹಂಗಾಮಿನ ಮುನ್ಸೂಚನೆ ನೀಡಿದ ವರುಣದೇವ

**ಹುನಗುಂದ :** ಕಳೆದ ಎರಡು ಮೂರು ತಿಂಗಳಿನಿಂದ ರಣ ಬಿಸಿಲು ಮತ್ತು ಭಯಂಕರ ಝುಳಕ್ಕೆ ಬಸವಳಿದು ಹೋಗಿದ ಜನರಿಗೆ ಗುರುವಾರ ಸ್ವಲ್ಪ ಪ್ರಮಾಣದ ಸುರಿದ ವರುಣನ ವರ್ಷಧಾರೆಯಿಂದ ಸ್ವಲ್ಪ ಬಿಸಿಲಿಗೆ ಮತ್ತು ಧಗೆಗೆ ಬ್ರೇಕ್ ಬಿದ್ದು, ಝುಳ...ಝುಳ... ಎನ್ನುತ್ತಿದ್ದ ಜನರಿಗೆ ಸ್ವಲ್ಪ ಮಟ್ಟಿನ ರಿಲ್ಯಾಕ್ಸ್ ಸಿಕ್ಕಂತಾಗಿದೆ.

ಮಳೆ ಇಲ್ಲದೆ ಕಂಗೆಟ್ಟಿದ್ದ ಜನರಿಗೆ ಗುರುವಾರ ತಾಲ್ಲೂಕಿನ ವಿವಿಧೆಡೆ ಮಳೆಯಾಗಿ, ಎರಡ್ಮೂರ ತಿಂಗಳಿಂದ ಬಿಸಿಲ ಬೇಗೆಯಿಂದ ಕಾದ ಬಾಣಲಿಯಂತಾಗಿದ್ದ ಧರೆಗೆ ಮಳೆರಾಯ ಸ್ವಲ್ಪ ತಂಪನ್ನೆರೆದಂತಾಗಿದೆ. ಮಧ್ಯಾಹ್ನದ 12 ಗಂಟೆಯ ಹೊತ್ತಿಗೆ ಗಾಳಿ ಮಳೆಯೊಂದಿಗೆ ಆಗಮನವಾದ ವರ್ಷಧಾರೆಯು 30 ನಿಮಿಷಕ್ಕೂ ಹೆಚ್ಚು ಕಾಲ ಹುನಗುಂದ ಪಟ್ಟಣ ಸೇರಿದ್ದಂತೆ ತಾಲೂಕಿನ ವಿವಿಧೆಡೆಯಲ್ಲಿ ಮಳೆಯ ತಂಪಿನ ಸಿಂಚಣವನ್ನು ಮೂಡಿಸಿದ್ದು ನಿಜಕ್ಕೂ ಧಗೆಯಿಂದ ಬಳಲಿ ಬೆಂಡಾಗಿದ್ದ ಜನರಿಗೆ ಸಂತಸ ತಂದಿದೆ.

ಮಳೆ ಇಲ್ಲದೆ ಬರದಿಂದ ತತ್ತರಿಸಿ ಹೋಗಿದ್ದ ಜನರು ಈ ಬಾರಿಯ ರಣ ಬಿಸಿಲಿಗೆ 60 ವರ್ಷದ ವಯೋವೃದ್ದರು ನನ್ನ ಜೀವನಮಾನದಲ್ಲಿಯೇ ಇಂತಹ ಮಹಾನ ಬಿಸಿಲಿನ ಅನುಭವವನ್ನು ನಾವು ಕಂಡಿರಲಿಲ್ಲ



ಎನ್ನುತ್ತಿದ್ದರು. ಬಿಸಿಲ ಧಗೆ ಮಿತಿ ಮೀರಿತ್ತು. ಅದರಲ್ಲೂ ಕಳೆದ ಎರಡು ವಾರಗಳಿಂದ ತಾಲೂಕಿನಾದ್ಯಂತ ಉಷ್ಣಾಂಶವು 40 ರಿಂದ 41 ಡಿಗ್ರಿ ತಲುಪಿತ್ತು. ಹಗಲಲ್ಲಿ ಹೊರಗಡೆ ಓಡಾಡಲಾಗದಷ್ಟು ಬಿಸಿಲು ಕಾಣಿಸಿ ಗೊಂಡಿತ್ತು. ಭಯಂಕರ ಪ್ರಖರ ಮಾನವಾದ ಬಿಸಿಲಿನ ಅನುಭವ ಬೆಳಿಗ್ಗೆ 9 ಗಂಟೆಗೆ ಹಾಕಿಕೊಂಡು ಬಟ್ಟೆಗಳು ಒದ್ದೆಯಾಗುತ್ತಿದ್ದವು ಮತ್ತೇ ಬಿಸಿಲು ಜೊತೆಗೆ ಬಿಸಿ ಗಾಳಿ ಬೀಸುವ ಜೊತೆಗೆ ಮಳೆ ಮುನ್ಸೂಚನೆ ನೀಡಿತ್ತು. ಅದರಂತೆ ಮಧ್ಯಾಹ್ನ ಮಳೆರಾಯ ಕೃಪೆ ತೋರಿದ. ಮುಂಗಾರು ಹಂಗಾಮಿನ ಮುನ್ನವೇ ಮಳೆರಾಯನ ಆಗಮನ ರೈತರಲ್ಲಿ ಸ್ವಲ್ಪ ಖುಷಿ ತಂದಿದೆ. ಇದೇ ರೀತಿ ವರುಣ ಕೃಪೆ ತೋರುತ್ತಾ ಹೋದರೇ ಖಂಡಿತ ತಾಲೂಕಿಗೆ ಆವರಿಸಿದ ಬರಗಾಲ ಮಾಯವಾಗಿ ಮುಂಗಾರು ಬೆಳೆಗಳು ಚನ್ನಾಗಿ ಬರುತ್ತವೆ ಎನ್ನುತ್ತಾರೆ ರೈತಾಪಿ ವರ್ಗ.

ಸಧ್ಯ ವರುಣನ ಕೃಪೆಗೆ ಜನರು ನೆಮ್ಮದಿಯ ನಿಟ್ಟುಸಿರು ಬಿಟ್ಟರು. ಏಕಾಏಕಾಕಿ ಸುರಿದ ಸ್ವಲ್ಪ ಪ್ರಮಾಣದ ಮಳೆಯಲ್ಲಿ ನೆನೆಯದಂತೆ ತಪ್ಪಿಸಿ ಕೊಳ್ಳಲು ಜನ ಪರದಾಡಿದರು. ದ್ವಿಚಕ್ರ ವಾಹನಗಳ ಸವಾರರು ಮಳೆಯಲ್ಲಿ ಸಂಚರಿಸಿದರು. ರಸ್ತೆಯ ತಗ್ಗು ಮತ್ತು ಗುಂಡಿಗಳಲ್ಲಿ ಕೆಲ ಹೊತ್ತು ನೀರು ನಿಂತಿತು. ಬಿಸಿಲಿಗೆ ಕಾದಿದ್ದ ಧರೆಯು ಮಳೆ ಸಿಂಚನದಿಂದ ಸ್ವಲ್ಪ ಮಟ್ಟಿಗೆ ತಣ್ಣಗಾದಂತಾಗಿದೆ.

**ತಾಲೂಕ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಮಲ್ಲಿಕಾರ್ಜುನ. ಎಂ. ಬಂಡರಗಲ್ಲ ಹುನಗುಂದ**

## ಅಂಜಲಿ ಅಂಬಿಗೇರ ಹತ್ಯೆ ಖಂಡಿಸಿ ಸಿಂದಗಿಯಲ್ಲಿ ಪ್ರತಿಭಟನೆ

**ಸಿಂದಗಿ :** ವಿಜಯಪುರ ಜಿಲ್ಲೆಯ ತಳವಾರ ಪರಿವಾರ ಹಿತರಕ್ಷಣಾ ಸಮಿತಿ ವತಿಯಿಂದ,

ಹುಬ್ಬಳ್ಳಿಯಲ್ಲಿ ನಡೆದ ಅಂಜಲಿ ಅಂಬಿಗೇರ ಕೊಲೆಯನ್ನು ಖಂಡಿಸಿ ಸಿಂದಗಿ ತಹಶಿಲ್ದಾರರ ಕಚೇರಿಯ ಮುಂದೆ ಪ್ರತಿಭಟನೆ ನಡೆಸಲಾಯಿತು. ಪ್ರತಿಭಟನೆ ಉದ್ದೇಶಿಸಿ ಮಾತನಾಡಿದ ಹೋರಾಟಗಾರರಾದ ಶಿವಾಜಿ ಮೆಟಗಾರ ಅಂಜಲಿ. ಅಂಬಿಗೇರ ಹತ್ಯೆ ಮಾಡಿದ ದುಷ್ಕರ್ಮಿಗೆ ಉಗ್ರವಾದ ಶಿಕ್ಷೆಯನ್ನು ವಿಧಿಸಿ ಇಂತಹ ಘಟನೆಗಳು ರಾಜ್ಯದಲ್ಲಿ ಮತ್ತೆ ಮರುಕಳಿಸ ದಂತಾಗಬಾರದು ಎಂದು ಎಚ್ಚರಿಸಿದರು. ಹಾಗೂ ತಹಶಿಲ್ದಾರರ ಮುಖಾಂತರ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದರು, ತಳವಾರ ಸಮಾಜದ ಮುಖಂಡರಾದ ಮಡಿವಾಳ. ನಾಯ್ಕೋಡಿ ಮಾತನಾಡಿ ಅಂಜಲಿ. ಅಂಬಿಗೇರ ಕುಟುಂಬಕ್ಕೆ ಅವಳೇ ಆಸರೆಯಾಗಿದ್ದು, ತಂದೆ,ತಾಯಿ ಇಲ್ಲದೆ ಅಜ್ಜಿ ಮತ್ತು ಸಹೋದರಿಯೊಂದಿಗೆ ಜೀವನ ಸಾಗಿಸುತ್ತಿದ್ದಳು ಮೃತ ಅಂಜಲಿ ಯ ಕುಟುಂಬಕ್ಕೆ ಸರ್ಕಾರವು ಪರಿಹಾರ ನೀಡಬೇಕೆಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಸಿಂದಗಿ ಪುರಸಭೆಯ ಮಾಜಿ ಅಧ್ಯಕ್ಷರು ಹಾಲಿ ಸದಸ್ಯರಾದ ಹಣಮಂತ. ಸುಣಗಾರ, ಪುರಸಭೆಯ ಸದಸ್ಯರಾದ



ಬಸವರಾಜ. ಯರನಾಳ, ಗೋಲ್ಲಾಳ ಬಂಕಲಗಿ, ಅನೀಲ.ಕಡಕೋಳ, ಸಂತೋಷ.ಹರನಾಳ ಮಲ್ಲು.ಕುರಿ,ನಾಗು.ತಳವಾರ,ಪರಶುರಾಮ. ಕೋಟಾರಗಸ್ತಿ,ವಿಜಯಕುಮಾರ.ಯಾಳವಾರ,ಈರಣ್ಣ.ಕುರಿ,ರಾಜ ಕುಮಾರ.ನಾಯ್ಕೋಡಿ,ಹಣಮಂತ.ಹಿಪ್ಪರಗಿ, ಮಲ್ಲು.ನಾಯ್ಕೋಡಿ, ಕುಮಾರ.ನಾಯ್ಕೋಡಿ,ಕಂಟೆಪ್ಪ.ಚೋರಸ್ತಿ, ಅಮೋಗಿ. ಜೈನಾಪುರ,ಭೂತಾಳಿ.ನಾಯ್ಕೋಡಿ ಸೇರಿದಂತೆ ಅನೇಕರು ಪ್ರತಿಭಟನೆ ಯಲ್ಲಿ ಭಾಗವಹಿಸಿದ್ದರು.

**ತಾಲೂಕ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಭೀಮಪ್ಪ ಹಚ್ಯಾಳ. ದೇವರ ಹಿಪ್ಪರಗಿ**

## ಅಸ್ತಮಾ ರೋಗವನ್ನು ನಿಷ್ಕಾಳಜಿ ಮಾಡದೇ, ಮುಂಜಾಗೃತಿ ಕ್ರಮ ವಹಿಸಿ – ಸಂಗಮೇಶ ಪಟ್ಟಣಶೆಟ್ಟಿ

**ಹುನಗುಂದ :** ಅನುವಂಶಿಕವಾಗಿ, ಕಾಟನ್ ಫ್ಯಾಕ್ಟರಿ ಮತ್ತು ಕಲುಷಿತ ವಾತಾವರಣದ ಜೊತೆಗೆ ಧೂಮಪಾನ ಮಾಡುವದರಿಂದ ರೋಗ ನಿರೋಧಕ ಶಕ್ತಿ ಕಡಿಮೆಯಾಗಿ ಬರುವಂತಅಪಾಯಕಾರಿಅಸ್ತಮಾರೊಗವನ್ನು ಮುಂಜಾಗೃತಾ ಕ್ರಮವಾಗಿ ಇನ್ಸುಲೇಷನ್ ಚಿಕಿತ್ಸೆ ಮೂಲಕ ಸಂಪೂರ್ಣ ನಿಯಂತ್ರಣ ಮಾಡಬಹುದು ಎಂದು ಪ್ರಾಚಾರ್ಯ ಸಂಗಮೇಶ ಪಟ್ಟಣಶಟ್ಟಿ ಹೇಳಿದರು.

ಪಟ್ಟಣದ ಗೌರಮ್ಮ ಚರಂತಿಮಠ ನರ್ಸಿಂಗ್ ವಿಜ್ಞಾನ ಮತ್ತು ಔಷಧ ಮಹಾ ವಿದ್ಯಾಲಯದಲ್ಲಿ ಹಮ್ಮಿಕೊಂಡ ವಿಶ್ವ ಅಸ್ತಮಾ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು ಇತ್ತೀಚೆಗೆ ಅಸ್ತಮಾ ಸಾಮಾನ್ಯ ಕಾಯಿಲೆಯಾಗಿದ್ದರೂ ಸಹಿತ ನಿಷ್ಕಾಳಜಿ



ಮಾಡಿದರೇ ಖಂಡಿತ ಅಪಾಯ ತಪ್ಪಿದ್ದಲ್ಲ. ಅದಕ್ಕೆ ತಕ್ಷಣ ಚಿಕಿತ್ಸೆ ಪಡೆದು ಅಸ್ತಮಾ ನಿಯಂತ್ರಣ ಮಾಡಿ ಕೊಳ್ಳುವುದು ಬಹಳ ಮುಖ್ಯವಾಗಿದೆ ಎಂದರು.

ನಾಗಾರ್ಜುನ್ ಎಂ ಮಾತನಾಡಿ ಕಾಯಿಲೆ ಬಂದರೆ ಅಪಾಯ ತಪ್ಪಿದ್ದಲ್ಲ. ಅಧುನಿಕ ತಂತ್ರಜ್ಞಾನ ಯುಗದಲ್ಲಿ ಯಾವುದೆ ಮಾರಣಾಂತಿಕ ಕಾಯಿಲೆ ಬರುವ ಮುನ್ನ ಲಭ್ಯವಿರುವ ಸಾಕಷ್ಟು ಮುನ್ನೆಚ್ಚರಿಕೆ ಕ್ರಮಗಳನ್ನು ವಹಿಸಿ ಅಪಾಯದಿಂದ ಪಾರಾಗುವ ಮಾರ್ಗವನ್ನು ಅನುಸರಿಸಬೇಕು ಎಂದರು. ವೀಣಾ ಕಿರಗಿ, ಸುನೀಲ್ ಕೆ, ಜಯಶ್ರೀ ಎನ್, ಶರಣಮ್ಮ ನಾಡಗೌಡ ಮತ್ತು ಮಹಾಂತೇಶ ಭಾವಿಕಟ್ಟಿ, ಹನಮಂತ ಕರೆಕೋಟಿ ಉಪಸ್ಥಿತರಿದ್ದರು. ನರ್ಸಿಂಗ್ ವಿದ್ಯಾರ್ಥಿಗಳು ಭಾಗವಿಸಿದ್ದರು ಲಕ್ಷ್ಮಿ ರಂಜಿತಾ ಸ್ವಾಗತಿಸಿದರು. ಚಂದ್ರಕಲಾ ನಿರೂಪಿಸಿದರು. ರಾಹುಲ ವಂದಿಸಿದರು.

**ತಾಲೂಕ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಮಲ್ಲಿಕಾರ್ಜುನ. ಎಂ. ಬಂಡರಗಲ್ಲ ಹುನಗುಂದ.**

## ಸಮಾನತೆ ಮೂಲಕ ಕಾಯಕ ತತ್ವ ಸಾರಿದ ಬಸವಣ್ಣ: ರಾಜು ಮನ್ನಿಕೇರಿ

**ಬಾಗಲಕೋಟೆ :** ಎಲ್ಲರಿಗೂ ಸಮಬಾಳು ಎಲ್ಲರಿಗೂ ಸಮಪಾಲು ಎಂದು ಸಾರಿದ ವಿಶ್ವಗುರು ಬಸವಣ್ಣನ ಸಮಾನತೆಯನ್ನು ಮೂಲಕ ಕಾಯಕ ತತ್ವ ಹಾಗೂ ಮಹತ್ವವನ್ನು ತಿಳಿಸಿದ ಮಹಾನ ನಾಯಕ ಬಸವಣ್ಣನವರು ಎಂದು ಕಾಂಗ್ರೆಸ್ ಪಕ್ಷದ ಎಸ್.ಸಿ.ಘಟಕದ ಜಿಲ್ಲಾಧ್ಯಕ್ಷ ರಾಜು ಮನ್ನಿಕೇರಿ ಹೇಳಿದರು.

ಅವರು ನಗರದ ಬಸವೇಶ್ವರ ವೃತ್ತದಲ್ಲಿರುವ ಬಸವೇಶ್ವರ ಪುತ್ಥಳಿಗೆ ಹಾರ ಹಾಕುವ ಮೂಲಕ ಬಸವಣ್ಣನವರಿಗೆ ಗೌರವ ಸೂಚಿಸಿ



ಮಾತನಾಡಿದ ಅವರು 12ನೇ ಶತಮಾನದಲ್ಲಿಯೇ ಸಮಾಜಿಕ ಕ್ರಾಂತಿಯ ಹರಿಕಾರರಾಗಿ ಅನುಭವ ಮಂಟಪದ ಮುಖಾಂತರ ಪ್ರಜಾಪ್ರಭುತ್ವದ ಕಲ್ಪನೆಯನ್ನು ನೀಡಿ, ಎಲ್ಲ ಸಮುದಾಯದ ಎಲ್ಲ ಜನರಿಗೂ ಸಮಬಾಳು,ಸಮಪಾಲು ಎಂಬ ತತ್ವದಡಿ ಸಮಾನತೆಯನ್ನು ಸಾರುವ ಮೂಲಕ ಕಾಯಕ ಮಹತ್ವವನ್ನು ತಿಳಿಸಿದ್ದು ವಿಶ್ವಗುರು ಬಸವಣ್ಣ, ಅವರ ಕಾಯಕವೇ ಕೈಲಾಸ, ಇಂದಿಗೂ ಪ್ರಸ್ತೂತವಾಗಿದೆ ಎಂದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ಎಸ್.ಸಿ.ಘಟಕದ ಮುಖಂಡರಾದ ಅಡಿವೆಪ್ಪ ಚಂದಾವರಿ, ಹುಲ್ಲಪ್ಪ ಅಂಟರತಾನಿ, ಸುರೇಶ ನಂದಿ, ಗ್ಯಾನಪ್ಪ ಚಲವಾದಿ, ಅಭಿಷೇಕ ತಳ್ಳಿಕೇರಿ ಕರ್ನಾಟಕ ರಕ್ಷಣಾ ವೇದಿಕೆಯ ಜಿಲ್ಲಾಧ್ಯಕ್ಷ ಬಸವರಾಜ ಧರ್ಮಂತಿ, ಬಸವರಾಜ ಅಂಬಿಗೇರಿ ಸೇರಿದಂತೆ ಮತ್ತಿತರರು ಕರವೇ ಕಾರ್ಯಕರ್ತರು ಉಪಸ್ಥಿತರಿದ್ದು ಅಣ್ಣ ಬಸವಣ್ಣನವರಿಗೆ ಗೌರವ ಸಲ್ಲಿಸಿದರು.

### ಕಸಾಪ ಭವನದಲ್ಲಿ 2024 ರ ಬಸವ ಜಯಂತಿ ಆಚರಣೆ | ಬಸವಣ್ಣನವರ ವಚನಗಳಲ್ಲಿರುವ ಜೀವನ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕು

## ವಿಶ್ವಗುರು ಬಸವಣ್ಣ ಜಗತ್ತಿಗೆ ವೈಚಾರಿಕತೆ, ಸಮಾನತೆ ತತ್ವ ಬಿತ್ತಿದವರು: ಡಾ.ರೇವಡಿಗಾರ





**ಬಾಗಲಕೋಟೆ :** 24 ಹನ್ನರಡನೆಯ ಶತಮಾನದಲ್ಲಿ ಸಾಮಾಜಿಕ ಸಮಾನತೆಗಾಗಿ ಕಲ್ಯಾಣದ ಕ್ರಾಂತಿ ಮೂಲಕ ಸಮಾನತೆಯ ಸಮಾಜವನ್ನು ಕಟ್ಟಲು ಬಸವಾದಿ ಶರಣರ ಮನಸ್ಸು ಮತ್ತು ಕಾಯಕದ ತತ್ವದ ಜೊತೆಗೆ ಸಮಾಜದಲ್ಲಿ ವೈಚಾರಿಕತೆ ಮೂಡಿಸಿ, ಮೂಡನಂಬಿಕೆಗಳನ್ನು ಹೊರದೂಡಿ ಜಗತ್ತಿಗೆ ವೈಚಾರಿಕತೆ ಮತ್ತು ಸಮಾನತೆಯ ತತ್ವವನ್ನು ಬಿತ್ತಿದವರು ವಿಶ್ವಗುರು ಬಸವಣ್ಣನವರು ಎಂದು ಸಾಹಿತಿ ಡಾ.ಮೈನುದ್ದೀನ್ ರೇವಡಿಗಾರ ಹೇಳಿದರು.

ಅವರು ಬಾಗಲಕೋಟೆ ನವನಗರದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಭಾಭವನದಲ್ಲಿ ಹಮ್ಮಿಕೊಂಡಿದ್ದ ಬಸವ ಜಯಂತಿ–2024 ಕಾರ್ಯಕ್ರಮವನ್ನು ಸಾಂಸ್ಕೃತಿಕ ನಾಯಕ ವಿಶ್ವಗುರು ಬಸವಣ್ಣನವರ ಭಾವಚಿತ್ರಕ್ಕೆ ಪುಷ್ಪರ್ಪಾಣೆ ಮಾಡಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಬಸವಣ್ಣನವರು ಭಕ್ತಿ ಭಂಡಾರಿಯಾಗಿ, ಸಮಾನತೆಯ ಹರಿಕಾರರಾಗಿ, ಸಮಾಜಕ್ಕೆ ಕಾಯಕ ತತ್ವದ ಮಹತ್ವ ತಿಳಿಸಿದ್ದಾರೆ ಎಂದರು.

ವಚನ ವೈಭವ ಮಹಿಳಾ ಜಾನಪದ ಕಲಾಸಂಘದ ಅಧ್ಯಕ್ಷೆ ಲಕ್ಷ್ಮೀ ಗೌಡರ ವಚನ ಸಾಹಿತ್ಯಕ್ಕೆ ಬಸವಣ್ಣವರ ಕೊಡುಗೆ ಕುರಿತು ಉಪನ್ಯಾಸ ನೀಡಿ ಮಾತನಾಡಿ, ವಿಶ್ವಗುರು ಬಸವಣ್ಣನವರ ಕಲ್ಪನೆಯಲ್ಲಿದ್ದ ಅನುಭವ ಮಂಟಪವೊಂದು ಆಧ್ಯಾತ್ಮಿಕ ವಿಶ್ವವಿದ್ಯಾಲಯವಾಗಿತ್ತು.

ಇಲ್ಲಿ ಜಾತಿ, ಮತ, ಪಂಥ ಭೇಧವಿಲ್ಲದೇ, ಕಾಯಕದಲ್ಲಿ ಮೇಲು–ಕೀಳುಗಳಿಲ್ಲದೆ ಎಲ್ಲರೂ ಸಮಾನರಾಗಿ ಭಾಗವಹಿಸಿ ತಮ್ಮ ವ್ಯಕ್ತಿತ್ವದ ಸಾರ್ಥಕತೆ ಪಡೆಯಬಹುದಾಗಿತ್ತು. ಕಾಯಕ ತತ್ವವು ಆತ್ಮಗೌರವ ತಂದುಕೊಡುತ್ತದೆ ಎಂದು ಹೇಳಿದರು.

ಕಸಾಪ ಜಿಲ್ಲಾಧ್ಯಕ್ಷರಾದ ಶಿವಾನಂದ ಶೆಲ್ಲಿಕೇರಿ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ ಬಸವಣ್ಣನವರು ಹೇಳಿರುವ ಅನ್ನದಾಸೋಹ, ಜ್ಞಾನ ದಾಸೋಹ, ಸಮಾಜದಲ್ಲಿ ನಿರಂತರವಾಗಿ ನಡೆಯಬೇಕು. ಸಮಾಜದಲ್ಲಿ ಸಮಾನತೆಯ ಪರಿಕಲ್ಪನೆ ಮೂಡಿ, ಬಸವಾದಿ ಶರಣರ ವಚನಗಳಲ್ಲಿರುವ ಮೌಲ್ಯಗಳನ್ನು ಅರಿತುಕೊಳ್ಳಬೇಕು. ಬಸವಣ್ಣನವರ ಸತ್ಯಶುದ್ಧ ಕಾಯಕದ ತತ್ವವು ನಮಗೆಲ್ಲರಿಗೂ ಮಾದರಿಯಾಗಿದೆ ಎಂದರು.

ಜಿಲ್ಲಾ ಗೌರವ ಕಾರ್ಯದರ್ಶಿ ಡಾ.ಚಂದ್ರಶೇಖರ ಕಾಳನ್ನವರ ಪ್ರಾಸ್ತಾವಿಕವಾಗಿ ಮಾತನಾಡಿ ವಿಶ್ವಗುರು ಬಸವಣ್ಣನವರಿಗೆ ಕರ್ನಾಟಕ ರಾಜ್ಯ ಸರ್ಕಾರವು ಕನ್ನಡ ನಾಡಿನ ಸಾಂಸ್ಕೃತಿಕ ನಾಯಕ ಎಂದು ಗೌರವಿಸಿರುವುದು ಸ್ವಾಗತಾರ್ಹವಾಗಿದೆ ಎಂದರು. ಬಸವ ಜಯಂತಿ ಅಂಗವಾಗಿ ವಚನ ಸಾಹಿತ್ಯದಲ್ಲಿ ಸೇವೆ ಸಲ್ಲಿಸಿರುವ ಬಾಗಲಕೋಟೆ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷರಾದ ಬಸವರಾಜ ಭಗವತಿ ಅವರಿಗೆ ಗಣ್ಯರಿಗೆ ಪರಿಷತ್ತಿನ ಪರವಾಗಿ ಸನ್ಮಾನಿಸಿ, ಗೌರವಿಸಲಾಯಿತು. ಭರತ ನೃತ್ಯ ಕಲಾವಿದೆಯಾದ ವಿಶಾರದೆ ವಂದಾಲ ಅವರಿಂದ ವಚನ ನೃತ್ಯ ರೂಪಕ ನಡೆಯಿತು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ವಚನ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಎ.ಎಸ್.ಪಾವಟೆ, ಸಣ್ಣ ಸಮುದಾಯಗಳ ಒಕ್ಕೂಟದ ಜಿಲ್ಲಾಧ್ಯಕ್ಷ ಅಮರೇಶ ಕೊಳ್ಳಿ, ಬಾದಾಮಿ ತಾಲೂಕ ಘಟಕದ ಅಧ್ಯಕ್ಷ ಬಿ.ಎಫ್. ಹೊರಕೇರಿ, ಡಾ.ಗೀತಾ ದಾನಶೆಟ್ಟಿ, ವಿಜಯಶ್ರೀ ಮುರನಾಳ, ಸಾಹಿತಿ ಡಾ.ಪಿ.ಎಂ.ಹುಗ್ಗಿ, ಜಾನಪದ ವಿದ್ವಾಂಸ ಡಾ.ಪ್ರಕಾಶ ಖಾಡೆ, ಆರ್.ಸಿ.ಚಿತ್ತವಾಡಗಿ, ಕೆರೂರು ವಲಯ ಘಟಕದ ಅಧ್ಯಕ್ಷ ಮಲ್ಲು ಪೂಜಾರ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಮಲ್ಲಿಕಾರ್ಜುನ ಪೂಜಾರಿ ಹಾಗೂ ಭಜನಾ ತಂಡದವರು ವಚನ ಗಾಯನದೊಂದಿಗೆ ಪ್ರಾರ್ಥನೆ ಮಾಡಿದರು. ಡಾ.ಚಂದ್ರಶೇಖರ ಕಾಳನ್ನವರ ಸ್ವಾಗತಿಸಿದರು. ಪ್ರೊ.ಸಂಗಮೇಶ ಬ್ಯಾಳಿ ಕಾರ್ಯಕ್ರಮ ನಿರೂಪಿಸಿದರು. ವಂದಿಸಿದರು.

## ಬಸವಾನಂದ ಪ್ರೌಢಶಾಲೆಯ ಎಸ್ಎಸ್ಎಲ್ಸಿ ಫಲಿತಾಂಶ 100%



**ಮಹಾಲಿಂಗಪುರ :** ಪಟ್ಟಣದ ಬಸವಾನಂದ ಪ್ರೌಢಶಾಲೆಯ 2024ನೇ ಸಾಲಿನ ಎಸ್ಎಸ್ಎಲ್ಸಿ ಫಲಿತಾಂಶವು ಶೇ.100%ರಷ್ಟಾಗಿದೆ. 18ನೇ ಬಾರಿಗೆ ಶಾಲೆಯ ಫಲಿತಾಂಶವು ನೂರಕ್ಕೆ ನೂರು ಆಗಿದೆ. ಪರೀಕ್ಷೆ ಎದುರಿಸಿದ 57 ವಿದ್ಯಾರ್ಥಿಗಳಲ್ಲಿ 57 ವಿದ್ಯಾರ್ಥಿಗಳು ಪಾಸಾಗಿದ್ದಾರೆ. ಉನ್ನತ ಶ್ರೇಣಿಯಲ್ಲಿ 10, ಪ್ರಥಮ ದರ್ಜೆಯಲ್ಲಿ 33, ದ್ವಿತೀಯ ದರ್ಜೆಯಲ್ಲಿ 13 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಲಕ್ಷ್ಮೀ ಮಂಟೂರ 604–96.64% ಶಾಲೆಗೆ ಪ್ರಥಮ, ಭಾಗ್ಯಲಕ್ಷ್ಮೀ ಹುಲಕುಂದ 598–95.68% ದ್ವಿತೀಯ, ನಂದಿನಿ ಹುನ್ನೂರ 597–95.52% ತೃತೀಯ ಸ್ಥಾನ ಗಳಿಸಿದ್ದಾರೆ. ಪ್ರಸನ್ನ ಹುಣಶ್ಯಾಳ 585–93.6%, ವಿಜಯ ಯಡಪ್ಪನವರ 575–92%, ಶ್ರೀನಿಧಿ ಚೌಗಲಾ 573–91.68%, ಸೌಮ್ಯ ಹಣಗಂಡಿ 90.56% ಸೇರಿದಂತೆ ಒಟ್ಟು 7 ವಿದ್ಯಾರ್ಥಿಗಳು 90ಕ್ಕಿಂತ ಅಧಿಕ ಅಂಕಗಳನ್ನು ಪಡೆದುಕೊಂಡಿದ್ದಾರೆ ಎಂದು ಶಾಲೆಯ ಮುಖ್ಯಗುರು ಎಸ್. ಕೆ.ಗಿಂಡೆ ತಿಳಿಸಿದ್ದಾರೆ.


## ಮೊರಾರ್ಜಿ ವಸತಿ ಶಾಲೆ ಶೇ.100 ಫಲಿತಾಂಶ



**ಮಹಾಲಿಂಗಪುರ :** ಪಟ್ಟಣದ ಮೊರಾರ್ಜಿ ದೇಸಾಯಿ ವಸತಿ ಶಾಲೆಯ 2023–24ನೇ ಸಾಲಿನ ಎಸ್ಎಸ್ಎಲ್ಸಿ ಪಲಿತಾಂಶ ಶೇ.100 ಆಗಿದೆ. ಪರೀಕ್ಷೆಗೆ ಹಾಜರಾದ 43 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಮಲ್ಲೇಶ ತುಕ್ಕಾನಟ್ಟಿ 587ಅಂಕ (93.92%) ಪ್ರಥಮ, ಪವನ ಆಲಗೂರ 578ಅಂಕ (92.48%) ದ್ವಿತೀಯ, ವರ್ಷಾ ರಾಮದುರ್ಗ 557ಅಂಕ (89.12%) ತೃತೀಯ ಸ್ಥಾನ ಪಡೆದು ಶಾಲೆಗೆ ಕೀರ್ತಿ ತಂದಿದ್ದಾರೆಂದು ಶಾಲೆಯ ಪ್ರಾಂಶುಪಾಲ ಅರವಿಂದ ಹೂಗಾರ ತಿಳಿಸಿದ್ದಾರೆ.

ಪುಣ್ಯಸ್ಮರಣೆ ಕಾರ್ಯಕ್ರಮ

# ಮಾನವ ಜನ್ಮದ ಸಾರ್ಥಕತೆಗೆ ಪುಣ್ಯವನ್ನು ಸಂಪಾದಿಸಿ: ಸಹಜಾನಂದಶ್ರೀ



**ಮಹಾಲಿಂಗಪುರ :** ಧರ್ಮ ಮಾರ್ಗದಲ್ಲಿ ನಡೆದು, ಪುಣ್ಯದ ಸಂಪಾದನೆ ಮೂಲಕ ಮಾನವ ಜನ್ಮದ ಸಾರ್ಥಕತೆಯನ್ನು ಕಾಣಬೇಕು ಎಂದು ಮಹಾಲಿಂಗಪುರ ಸಿದ್ದಾರೂಢ ಬ್ರಹ್ಮವಿದ್ಯಾಶ್ರಮದ ಸಹಜಾನಂದ ಸ್ವಾಮಿಜಿ ಹೇಳಿದರು.

ಸಮೀಪದ ಸೈದಾಪೂರ ಗ್ರಾಮದಲ್ಲಿ ಜಗದ್ಗುರು ಸಿದ್ದಾರೂಢ ಸದ್ಭಕ್ತ ಮಂಡಳಿ ಹಾಗೂ ಹಾದಿಮನಿ ಪರಿವಾರದ ಸಂಯುಕ್ತಾಶ್ರಯದಲ್ಲಿ ಜರುಗಿದ ಶರಣಶ್ರೀ ದಿ.ಬಾಬುರಾವ ಹಾದಿಮನಿ ಅವರ ತೃತೀಯ ಪುಣ್ಯಸ್ಮರಣೆ ಅಂಗವಾಗಿ ಜರುಗಿದ ಸತ್ಸಂಗಕಾರ್ಯಕ್ರಮದಸಾನಿಧ್ಯವಹಿಸಿಮಾತನಾಡಿದ ಅವರು ಮನುಷ್ಯನು ನಿರಾಭಾರಿಯಾಗಿ ಮಾಡುವ ಜನಸೇವೆ, ಪರೋಪಕಾರ, ಸಹಾಯ, ಸಹಕಾರದ ಗುಣಗಳಿಂದಲೇ ಉಸಿರು ನಿಂತ ಮೇಲೆ ಹೆಸರು ಉಳಿಯಲು ಸಾಧ್ಯ. ಪರಹಿತದಿಂದ ಮಾತ್ರ ಕೆಡುವ ಶರೀರದ ಸಫಲತೆಯನ್ನು ಕಾಣಲು ಸಾಧ್ಯ.

ಈ ನಿಟ್ಟಿನಲ್ಲಿ ಶರಣಶ್ರೀ ದಿ.ಬಾಬು ಹಾದಿಮನಿಯವರು ಸಂಸಾರ ಮತ್ತು ಅಧ್ಯಾತ್ಮ ಎರಡು ರಂಗಗಳಲ್ಲಿಯೂ ಉತ್ತಮ ಸೇವೆಯ ಮೂಲಕ ಜನಾನುರಾಗಿಯಾಗಿ, ಜಾತಿ, ಮತ, ಪಂಥಗಳೆಂಬ ಬೇಧವಿಲ್ಲದೇ, ಎಳ್ಳಷ್ಟು ಸ್ವಾರ್ಥವಿಲ್ಲದೇ ಸಮಾಜದಲ್ಲಿನ ಹಲವಾರು ಮಠ, ಆಶ್ರಮಗಳ ಅಭಿವೃದ್ಧಿಗಾಗಿ ಶ್ರಮಿಸಿ, ಮಾದರಿ ಶರಣರಾಗಿ ಬಾಳಿ ಬದುಕಿದ್ದರು. ಅವರ ಬದುಕು ಇಂದಿನ ಯುವಕರಿಗೆ ಮಾದರಿ. ಹಾದಿಮನಿ ಕುಟುಂಬಸ್ಥರು ಅವರು ಹಾಕಿಕೊಟ್ಟ ಅಧ್ಯಾತ್ಮ ಸಂಸ್ಕಾರವನ್ನು ಮುಂದುವರೆಸಿಕೊಂಡು ಹೋಗುತ್ತಿರುವದು ಶ್ಲಾಘನೀಯ ಎಂದರು.

ರನ್ನಬೆಳಗಲಿಯ ಯೋಗಿರಾಜ ಸದಾಶಿವ ಗುರೂಜಿ, ಕಂಕನವಾಡಿಯ ಮಾರುತಿ ಶರಣರು ಮಾತನಾಡಿ ಶರೀರ ಅನಿತ್ಯವಾಗಿದ್ದು, ಬದುಕಿದ್ದಾಗ ಮನುಷ್ಯ ಮಾಡಿದ ಸತ್ಕಾರ್ಯಗಳಿಂದ ಧರ್ಮ ಮತ್ತು ಕೀರ್ತಿ ಎರಡು ಮಾತ್ರ ಉಳಿಯುತ್ತವೆ ಎಂದರು. ಹಾದಿಮನಿ ಕುಟುಂಬಸ್ಥರು ಪೂಜ್ಯರು ಮತ್ತು ಶರಣರನ್ನು ಸನ್ಮಾನಿಸಿ–ಗೌರವಿಸಿದರು. ಕಪ್ಪಲಗುದ್ದಿಯ ಅಂಧ ಸಂಗೀತ ಕಲಾವಿದ ಕುಮಾರ ಬಡಿಗೇರ ಅವರಿಂದ ಸಂಗೀತ ಕಾರ್ಯಕ್ರಮ ಜರುಗಿತು.

ಹಿರಿಯರಾದ ಮಲಗೌಡ ಪಾಟೀಲ, ರಾಮು ಹಾದಿಮನಿ, ಚೇತನ ಹಾದಿಮನಿ, ಶಿವಾನಂದ ಹಾದಿಮನಿ, ಡಾ.ಎಲ್.ಬಿ.ಪ್ರಸಾದ, ರಂಗನಗೌಡ ಪಾಟೀಲ, ಮಹಾಲಿಂಗಪ್ಪ ಜಕ್ಕನ್ನವರ, ಭೀಮಸಿ ತಿಮ್ಮಾಪೂರ, ಅಲ್ಲಪ್ಪ ಗುಂಜಿಗಾಂವಿ, ಮಹಾಲಿಂಗಪ್ಪ ಸನದಿ, ಡಾ.ರಾಜೇಂದ್ರ ಪಾಟೀಲ, ವಸಂತಗೌಡ ಪಾಟೀಲ, ಚಂದ್ರಶೇಖರ ಮೋರೆ, ಬಸವರಾಜ ಶಿರೋಳ, ವಿವೇಕ ಮಲಕಾಪೂರ, ಸಂಗಪ್ಪ ಮೇಸ್ತ್ರಿ, ರಾಮನಗೌಡ ಪಾಟೀಲ, ಪ್ರಭು ಹುಬ್ಬಳ್ಳಿ, ಶಿವಲಿಂಗ ಮೇಣಸಪ್ಪಗೋಳ, ಸಂತೋಷ ಕುರುಬರ, ಉದಯ ಹಾದಿಮನಿ, ಸುಭಾಸ ನಾಯಕ, ಮಲ್ಲಾರಡ್ಡಿ ಯಾದವಾಡ, ಹಣಮಂತ ಮೀರಾಪಟ್ಟಿ, ವಿದ್ಯಾ ಮೇಣಸಪ್ಪಗೋಳ, ಸರಸ್ವತಿ ಕುರುಬರ ಸೇರಿದಂತೆ ಹಲವರು ಇದ್ದರು.

# ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ 6ನೇ ತರಗತಿ ಪ್ರವೇಶಕ್ಕೆ ಅರ್ಜಿ ಅಹ್ವಾನ

**ವಿಜಯಪುರ:** ಪ್ರತಿಭಾವಂತ ಪರಿಶಿಷ್ಟಜಾತಿ, ಸೇರಿರುವ 6ನೇ ತರಗತಿ ವಿದ್ಯಾರ್ಥಿಗಳನ್ನು ವಿಜಯಪುರ ಜಿಲ್ಲೆಯ ಪ್ರತಿಷ್ಠಿತ ಶಾಲೆಗಳಲ್ಲಿ 2024–25ನೇ ಶೈಕ್ಷಣಿಕ ಸಾಲಿಗೆ ಪ್ರವೇಶ ಕಲ್ಪಿಸಲು ಅರ್ಜಿಗಳನ್ನು ಅಹ್ವಾನಿಸಲಾಗಿದೆ. ಆಸಕ್ತ ವಿದ್ಯಾರ್ಥಿಗಳು ಮೇ.21 ರೊಳಗೆ ಆನ್ ಲೈನ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. ಆಯ್ಕೆಯನ್ನು ಪ್ರವೇಶ ಪರೀಕ್ಷೆ ಮೂಲಕ ಮಾಡಲಾಗುತ್ತದೆ. ಹೆಚ್ಚಿನ ಮಾಹಿತಿಗಾಗಿ ಉಪ ನಿರ್ದೇಶಕರ ಕಚೇರಿ, ಸಮಾಜ ಕಲ್ಯಾಣ ಇಲಾಖೆ ವಿಜಯಪುರ ಸಂಪರ್ಕಿಸಬಹುದಾಗಿದೆ ಎಂದು ಉಪ ನಿರ್ದೇಶಕರಾದ ಪುಂಡಲಿಕ್ ಮಾನವರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಎಸ್‌ಆರ್‌ಎ ಪ್ರೌಢ ಶಾಲೆಯ ಸಾಧನೆ ಮಾಡಿದ ವಿದ್ಯಾರ್ಥಿಗಳು



**ರಬಕವಿ–ಬನಹಟ್ಟಿ :** ಬನಹಟ್ಟಿಯ ಜನತಾ ಶಿಕ್ಷಣ ಸಂಘದ ಎಸ್ ಆರ್ ಎ ಪ್ರೌಢ ಶಾಲೆಯ ಕನ್ನಡ ಮತ್ತು ಉರ್ದು ವಿಭಾಗದ ಫಲಿತಾಂಶ ಶೇ 93.19 ರಷ್ಟಾಗಿದೆ ಎಂದು ಚೇಮನ್ನರಾದ ಬಸವಂತ ಜಾಡಗೌಡ ತಿಳಿಸಿದರು.

ಶಾಲೆಯ ಸೌಂದರ್ಯ ಮಾಳಿ 618 ಅಂಕಗಳನ್ನು ಪಡೆದುಕೊಂಡು ರಬಕವಿ ಬನಹಟ್ಟಿಗೆ ತಾಲ್ಲೂಕಿಗೆ ಪ್ರಥಮ, ಪವಿತ್ರಾ ಮಠದ 617ಅಂಕಗಳನ್ನು ಪಡೆದುಕೊಂಡು ತಾಲ್ಲೂಕಿಗೆ ದ್ವಿತೀಯ ಮತ್ತು 615 ಅಂಕಗಳನ್ನು ಪಡೆದುಕೊಂಡ ಶ್ರುತಿ ಮಟಕೆ ತೃತೀಯ ಸ್ಥಾನ ಪಡೆದುಕೊಂಡಿದ್ದಾರೆ.

ಅಲ್ಲದೇ ಶಿವಾನಿ ಅಥಣಿ 98.24% , ಸುಫಿಯಾ ಫನಿಬಂದ 98.08%, ಉಮಾ ಕರ್ಲಿ 98.08% , ತ್ರುಶಾ ಪೂಜಾರಿ 97.92% , ಪ್ರಸನ್ನಕುಮಾರ ಬಾಬಾನಗರ 97.44%, ಅಭಿಷೇಕ ಕೋಷ್ಠಿ 97.12%, ದಾನಮ್ಮ ಬಡ್ಡಿ 97.12%, ತನು ಕರಲಟ್ಟಿ 96.32%, ವೈಶಾಲಿ ಲುಕ್ಕ 96.32%, ನಮ್ರತಾ ಬಿಳ್ಳೂರ 96%, ಸೃಷ್ಟಿ ಬುಜರುಕ 95.68% , ಪ್ರವೀನಕುಮಾರ ಹನಗಂಡಿ 94.88% , ವರ್ಷಾ ಧಬಾಡಿ 94.4% , ತುಳಸಿ ಧಡೂತಿ 94.4% , ದೀಪಾ ಖವಾಸಿ 94.24%, ಸಂಜನಾ ಕಮತಗಿ 93.6%, ಶ್ರಾವಣಿ ಕಿತ್ತೂರ 93.6%, ಮಲ್ಲಿಕಾರ್ಜುನ ಜನವಾಡ 93.44% , ಸೌಮ್ಯ ಹಟ್ಟಿಪಾಟೀಲ 93.44% , ಪರಮಾನಂದ ಧಬಾಡಿ 93.28% , ಸಹನಾ ಗಡ್ಡಿಗೌಡರ 93.28% , ಅನು ಕರಲಟ್ಟಿ 93.28% , ರಕ್ಷಿತಾ ಬಳಿಗೇರಿ 93.28% , ಪಲ್ಲವಿ ಟಿರಕಿ 93.12% , ಪೃತ್ವಿ ಹಿತ್ತಲಮನಿ 93.12%, ಸ್ನೇಹಾ ಕೋಪರ್ಡೆ 92.96%, ವೈಷ್ಣವಿ ಬಕರೆ 92.16%, ಸಹನಾ ಮಾಲಗಾರ 91.84% , ಅನುರಾಧಾ ಕೋಳಿ 91.68%, ಮಹೇಶ ಹಲಗಲಿ 91.52% , ಗಣೇಶ ಗುಗ್ಗರೆ 90.88%, ನಾಗೇಶ ಹಟ್ಟಿಪಾಟೀಲ 90.88% , ಶಿವಾನಿ ಗಸ್ತಿ 90.4% , ಸುದೀಪ ಇಟಿ 90.4% , ಆಕಾಶ ಮುಂಡಾಸ 90.24% ಅಂಕ ಪಡೆದು ಸಾಧನೆ ಮಾಡಿದ್ದಾರೆ.

# ರನ್ನಬೆಳಗಲಿಯ ಮೊರಾರ್ಜಿ ಶಾಲೆಗೆ ಶೇ.100 ಫಲಿತಾಂಶ

**ಮಹಾಲಿಂಗಪುರ :** ಸಮೀಪದ ರನ್ನಬೆಳಗಲಿ ಪಟ್ಟಣದ ಸದಾಶಿವ ನಗರದಲ್ಲಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಎಸ್.ಎಸ್.ಎಲ್.ಸಿ ಫಲಿತಾಂಶವು ಶೇ.100 ಆಗಿದೆ. ಲಾಯಕ್ಕ ಯಡಹಳ್ಳಿ(96.32%) ಪ್ರಥಮ, ರಮ್ಯಾ ಬೀಳಗಿ (94.88%) ದ್ವಿತೀಯ, ಐಶ್ವರ್ಯ ಕಳ್ಳಿಬಡ್ಡಿ (93.6%) ತೃತೀಯ ಸ್ಥಾನ ಪಡೆದಿದ್ದಾರೆ. ಉನ್ನತಶ್ರೇಣಿ–11,



ಪ್ರಥಮ ದರ್ಜೆ–36, ದ್ವಿತೀಯ ದರ್ಜೆ–2 ಸೇರಿದಂತೆ 49ಕ್ಕೆ 49 ವಿದ್ಯಾರ್ಥಿಗಳು ತೇರ್ಗಡೆಗೊಂಡಿದ್ದಾರೆ. ವಿದ್ಯಾರ್ಥಿಗಳಿಗೆ ಬಾಗಲಕೋಟೆ ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕರಾದ ನಂದಾ ಹಣಬರಟ್ಟಿ, ಮುಧೋಳ ತಾಲೂಕಾ ಸಹಾಯಕ ನಿರ್ದೇಶಕರಾದ ಮೋಹನ ಕೂರೆಡ್ಡಿ, ಶಾಲೆಯ ಪ್ರಭಾರಿ ಪ್ರಾಂಶುಪಾಲ ಕಿರಣ ಜಾಧವ ಅಂಭಿನಂದಿಸಿದ್ದಾರೆ.

# ಓಯಾಸಿಸ್‌ನಂತಾದ ಹಿಪ್ಪರಗಿ ಜಲಾಶಯ

**ರಬಕವಿ–ಬನಹಟ್ಟಿ :** ಬರೋಬ್ಬರಿ 6 ಟಿಎಂಸಿ ಸಾಮರ್ಥ್ಯ ಹೊಂದಿರುವ ಹಿಪ್ಪರಗಿ ಜಲಾಶಯದಲ್ಲಿ ಇದೀಗ ಕೇವಲ 0.2 ಟಿಎಂಸಿಯಷ್ಟು ಮಾತ್ರ ನೀರಿನ ಸಂಗ್ರಹವಿದೆ. ಅಲ್ಲಲ್ಲಿ ತಗ್ಗು ಪ್ರದೇಶದಲ್ಲಿ ನಿಂತ ನೀರು ಮರಭೂಮಿಯಲ್ಲಿನ ಓಯಾಸಿಸ್ನಂತೆ ಜಲಾಶಯ ಬಿಂಬಿತವಾಗಿದೆ. ಇದೀಗ ಬೆಳಗಾವಿ, ವಿಜಯಪುರ ಹಾಗು ಬಾಗಲಕೋಟೆ ಜಿಲ್ಲೆಗಳ ಜನತೆಗೆ ಕುಡಿಯುವ ನೀರಿನ ಹಾಹಾಕಾರ ಶೀಘ್ರವೇ ಪ್ರಾರಂಭವಾಗಲಿದೆ.



ಇದೇ ರೀತಿ ರಬಕವಿ–ಬನಹಟ್ಟಿ ಪಟ್ಟಣಕ್ಕೂ ಅನಿವಾರ್ಯವಾಗಿದ್ದು , ಸಮೀಪದ ಮಹಿಷವಾಡಗಿ ಬ್ಯಾರೇಜ್ ಹತ್ತಿರದ ತಗ್ಗು ಪ್ರದೇಶಗಳಿಂದ ಪೈಪ್ಲೈನ್ ಮೂಲಕ ನೀರು ತುಂಬಿಸಿ ಅವಳಿ ಪಟ್ಟಣಗಳಿಗೆ ಇನ್ನೆರಡು ದಿನ ಮಾತ್ರ ನೀರು ಪೂರೈಕೆ ಮಾಡಲು ಸಾಧ್ಯವೆಂಬುದು ಅಧಿಕಾರಿಗಳ ಮಾತು.

ತೀವ್ರ ನಿಗಾ: ಈಗಾಗಲೇ ರಬಕವಿ ನಗರಕ್ಕೆ ನೀರು ಪೂರೈಕೆಗೆ ತೀವ್ರ ಸಮಸ್ಯೆ ಎದುರಾಗಿದೆ. ಮುಂದಿನ ದಿನಗಳಲ್ಲಿ ಸರ್ಕಾರಿ ಕೊಳವೆ ಬಾವಿ, ತೆರೆದ ಬಾವಿಗಳ ಮೂಲಕ ನೀರು ಪೂರೈಸಲು ಸಕಲ ಸಿದ್ಧತೆಗಳಿಂದ ಸಿಬ್ಬಂದಿ ವರ್ಗ ಸನ್ನದ್ಧವಾಗಿದೆ. ನೀರನ್ನು ಮಿತವ್ಯಯವಾಗಿ ಬಳಸಬೇಕೆಂದು ಪೌರಾಯುಕ್ತ ಜಗದೀಶ ಈಟಿ ಮನವಿ ಮಾಡಿದ್ದಾರೆ.

ನೀರು ಬಗ್ಗೆ ಭರವಸೆ ಹರಿಸಿದ ಜನಪ್ರತಿನಿಧಿ: ಸಚಿವ, ಸಂಸದ, ಶಾಸಕರನ್ನೊಳಗೊಂಡ ಎಲ್ಲ ಜನಪ್ರತಿನಿಧಿಗಳು ಈಗಾಗಲೇ ಕೃಷ್ಣೆಗೆ ನೀರು ಹರಿಸುವಲ್ಲಿ ಮಹಾರಾಷ್ಟ್ರ ಸರ್ಕಾರ ಜೊತೆ ಮಾತುಕತೆ ನಡೆಸಲಾಗಿದೆ. ಎರಡು ಟಿಎಂಸಿಯಷ್ಟು ನೀರು ಬಿಡುಗಡೆಗೆ ಒತ್ತಾಯಿಸಿದ್ದು, ಶೀಘ್ರವೇ ನೀರು ಬಿಡುಗಡೆಯಾಗಲಿದೆ ಎಂದು ಗಾಳಿ ಮಾತು ಹೇಳುತ್ತ ಲೋಕಸಭಾ ಚುನಾವಣೆ ಮುಕ್ತಾಯಗೊಳಿಸಿದ್ದಾರೆ.

ಈಗಲೂ ಕೃಷ್ಣೆಗೆ ನೀರು ಹರಿಸುವ ಬದಲು ಬರೀ ಹುಸಿ ಭರವಸೆಗಳನ್ನು ಹರಿಸಿತ್ತು, ಜನರಿಗೆ ನೀರಿನ ಭವಣೆಯಿಂದ ತಪ್ಪಿಸಲು ಯಾವುದೇ ತಂತ್ರ ರೂಪಿಸದೆ ನೀರು ಬಿಡುಗಡೆ ಬಗ್ಗೆ ಜಾಣ ಕುರುಡುತನ ಪ್ರದರ್ಶಿಸುತ್ತಿರುವದು ನಿಜಕ್ಕೂ ಮುಜುಗರ ತರುವಲ್ಲಿ ಕಾರಣವಾಗಿದೆ.

# ಪಾಲಕರ ಶ್ರಮ ಮಹತ್ತರವಾದುದು



**ರಬಕವಿ–ಬನಹಟ್ಟಿ :** ವಿದ್ಯಾರ್ಥಿಗಳ ಸಾಧನೆಯ ಹಿಂದೆ ಪಾಲಕರ ಶ್ರಮ ಅತ್ಯಂತ ಮಹತ್ತರವಾಗಿದೆ ಎಂದು ಜನತಾ ಶಿಕ್ಷಣ ಸಂಘದ ಆಡಳಿತ ಮಂಡಳಿಯ ಸದಸ್ಯ ದುಂಡಪ್ಪ ಮಾಚಕನೂರ ಹೇಳಿದರು.

ಶನಿವಾರ ಇಲ್ಲಿನ ಎಸ್. ಆರ್. ಎ. ಪ್ರೌಢ ಶಾಲೆಯ ಎಸ್. ಎಸ್. ಎಲ್.ಸಿ. ಪರೀಕ್ಷೆಯಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಅವರು ಮಾತನಾಡಿದರು.

ಗ್ರಾಮೀಣ ಪ್ರದೇಶದಲ್ಲಿಯ ಬಡ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸೂಕ್ತವಾದ ಪ್ರೋತ್ಸಾಹ ದೊರೆತರೆ ಅವರು ಕೂಡಾ ಉತ್ತಮ ಸಾಧನೆ ಮಾಡಬಲ್ಲರು. ಸಾಧನೆ ಮಾಡಿದ ವಿದ್ಯಾರ್ಥಿಗಳು ಮುಂದಿನ ವಿದ್ಯಾಭ್ಯಾಸವನ್ನು ಸಂಘದ ಅಂಗ ಸಂಸ್ಥೆಗಳಲ್ಲಿ ಮಾಡಿದರೆ ಅವರಿಗೆ ಉಚಿತ ಶಿಕ್ಷಣ ನೀಡಲಾಗುವುದು ಎಂದು ಮಾಚಕನೂರ ತಿಳಿಸಿದರು.

ತಾಲ್ಲೂಕಿಗೆ ಪ್ರಥಮ ಸ್ಥಾನ ಪಡೆದ ಸೌಂದರ್ಯ ಮಾಳಿ, ದ್ವಿತೀಯ ಸ್ಥಾನ ಪಡೆದ ಪವಿತ್ರಾ ಮಠದ ಹಾಗೂ ನಾಲ್ಕನೆಯ ಸ್ಥಾನ ಪಡೆದ ಸೃಷ್ಠಿ ಮಟಕೆಯವರನ್ನು ಸನ್ಮಾನಿಸಲಾಯಿತು.

ಸಂಘದ ಕಾರ್ಯಾಧ್ಯಕ್ಷ ಬಸವಂತ ಜಾಡಗೌಡ, ಎಂ. ಜಿ. ಕೆರೂರ, ಶ್ರೀಶೈಲ ಯಾದವಾಡ, ರಾಜಶೇಖರ ಸೋರಗಾಂವಿ, ಓಂಪ್ರಕಾಶ ಕಾಬ್ರಾ, ಶಂಕರ ಜಾಲಿಗಿಡದ, ಗಂಗಾಧರ ಕೊಕಟನೂರ, ಡಾ. ವಿ. ಆರ್. ಕುಳ್ಳಿ, ಮುಖ್ಯ ಶಿಕ್ಷಕಿ ಎನ್. ಎಸ್. ಕಂಕಣಮೇಲಿ, ರಾಜು ಉಕ್ಕಲಿ, ಡಿ. ಎಂ. ನದಾಫ, ಬಿ. ಜೆ. ಜೋರಾಪುರ, ಎಂ. ಪಿ. ಧೂಪದಾಳ, ಬಿ. ಎಸ್. ಬಳ್ಳೂರ, ಎಸ್. ಎಂ. ತೇಲಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ರಕ್ತದಾನ ಮಾಡಲು ಸರದಿಯಲ್ಲಿ ನಿಂತ ಕಾರ್ಮಿಕರು

**ರಬಕವಿ–ಬನಹಟ್ಟಿ :** ಸಂಭ್ರಮಾಚರಣೆಗಳನ್ನು ಭರ್ಜರಿ ಭೋಜನ, ಶಾಮಿಯಾನ ಸೇರಿದಂತೆ ಲಕ್ಷಾಂತರ ರೂ.ಗಳ ವೆಚ್ಚದಲ್ಲಿ ಕಾರ್ಯಕ್ರಮಗಳನ್ನು ಆಯೋಜನೆ ಮಾಡುವಲ್ಲಿ ತಲ್ಲೀನರಾಗಿರುತ್ತಾರೆ. ಇಲ್ಲೊಂದು ಸಿಹಿ ತಿನಿಸಿನ ಕಾರ್ಖಾನೆ ರಕ್ತದಾನ ಮಾಡುವ ಮೂಲಕ ಮಾನವೀಯತೆ ಮೆರೆದಿದೆ.

ಬನಹಟ್ಟಿಯ ದೇಸಾಯಿ ಆಹಾರ ಕಾರ್ಖಾನೆಯು ಇಂತಹ ರಕ್ತದಾನ ಕಾರ್ಯಕ್ರಮ ಆಯೋಜಿಸುವ ಮೂಲಕ ತನ್ನ ಬೆಳ್ಳಿ ಮಹೋತ್ಸವ ಆಚರಣೆ ಮಾಡಿಕೊಂಡಿರುವುದು ವಿಶೇಷ.

ಕಾರ್ಖಾನೆಯಲ್ಲಿನ ನೂರಾರು ಕಾರ್ಮಿಕರು ಈ ರಕ್ತದಾನ ಮಾಡುವಲ್ಲಿ ಬೆಳಿಗ್ಗಿನಿಂದಲೇ ಸರದಿಯಲ್ಲಿ ನಿಂತು ಸ್ವಯಂ ರಕ್ತದಾನ ಮಾಡಿರುವದು ವಿಶೇಷ. ಸಂಜೆಯವರೆಗೂ ರಕ್ತದಾನ ಕಾರ್ಯಕ್ರಮ ಜರುಗಿತು.




ದೆಹಲಿಯಿಂದ ಕಾರ್ಮಿಕರಾಗಿ ಕೆಲಸ ಮಾಡುತ್ತಿರುವ 38 ವರ್ಷದ ರಾಜು ತನ್ನ ಜೀವನದಲ್ಲಿ ಎಂದಿಗೂ ರಕ್ತದಾನ ಮಾಡಿರಲಿಲ್ಲ. ನಾನು ಟೆಂಟ್ಗೆ ಹೋಗಿ ಕೆಲವು ಫಾರ್ಮಗಳನ್ನು ತುಂಬಿದೆ. ನಂತರ ನಾನು ರಕ್ತದಾನ ಮಾಡಲು ಸಿದ್ಧನಿದ್ದೇನೆ. ಎಂದು ನನ್ನನ್ನು ಕೇಳಲಾಯಿತು. ಮತ್ತು ನಾನು ಹೇಳಿದೆ, ಏಕೆ ಮಾಡಬಾರದು ? ನಾನು ಅದನ್ನು ಸಂತೋಷದಿಂದ ಮಾಡುತ್ತೇನೆ. ಇದು ನೋವಿನಿಂದ ಕೂಡಿದೆ ಎಂದು ನಾನು ಭಾವಿಸಿದ್ದೆ. ಆದರೆ ಯಾವುದೇ ರೀತಿಯ ನೋವು ಅನುಭವಿಸಲಿಲ್ಲ ಎಂದು ಹೇಳುತ್ತಾರೆ. ಆಸ್ಪತ್ರೆಯಲ್ಲಿ ರಕ್ತದ ಕೊರತೆ ಕಾರಣ

> “ಸ್ವಯಂಪ್ರೇರಿತವಾಗಿ ನೂರಾರು ಕಾರ್ಮಿಕರು ರಕ್ತದಾನದಲ್ಲಿ ತೊಡಗಿದ್ದು ಹೆಮ್ಮೆಯಿದೆ. ನಿರಂತರ ಇಂತಹ ಕಾರ್ಯಕ್ರಮಗಳಿಂದ ಆಸ್ಪತ್ರೆಗಳಲ್ಲಿನ ರೋಗಿಗಳಿಗೆ ಸುಲಭವಾಗಿ ರಕ್ತ ದೊರಕಿ, ಚಿಕಿತ್ಸೆಗೆ ಸಹಕಾರಿಯಾಗಲಿದೆ.’
>
> ◆ ಶಂಕರ ಸಂಕಣ್ಣವರ
> ಸಲಹಾ ಸಮಿತಿ ಅಧ್ಯಕ್ಷರು, ದೇಸಾಯಿ ಆಹಾರ ಕಾರ್ಖಾನೆ.

ವಿನಾಕಾರಣ ಕಾರ್ಯಕ್ರಮಗಳನ್ನು ಮಾಡುವ ಬದಲಾಗಿ ಮಾನವ ಸಂಪನ್ಮೂಲಕ್ಕೆ ಅನುಕೂಲವಾಗುವಂಥ ಕಾರ್ಯಕ್ರಮಗಳನ್ನು ರೂಪಿಸುವದು ಮೊದಲಿನಿಂದಲೂ ರೂಢಿ. ಎಲ್ಲ ಕಾರ್ಮಿಕರು ಉತ್ಸುಕತೆಯಿಂದ ರಕ್ತದಾನದಲ್ಲಿ ಪಾಲ್ಗೊಂಡಿದ್ದು ತಮಗೆ ಹೆಮ್ಮೆಯಿದೆ ಎನ್ನುತ್ತಾರೆ ಕಾರ್ಖಾನೆ ಮಾಲಿಕ ಪ್ರಕಾಶ ದೇಸಾಯಿ.


# ಯಲ್ಲಟ್ಟಿಯಲ್ಲಿ ಮಾರುತೇಶ್ವರ ನಿರೋಕಳಿಗೆ ಚಾಲನೆ



**ರಬಕವಿ–ಬನಹಟ್ಟಿ :** ತಾಲೂಕಿನ ಯಲ್ಲಟ್ಟಿ ಗ್ರಾಮದಲ್ಲಿ ಮೂರು ದಿನಗಳ ಕಾಲ ನಡೆಯುವ ಮಾರುತೇಶ್ವರ ನಿರೋಕಳಿ ನಿಮಿತ್ಯ ಗ್ರಾಮದಲ್ಲಿನ ಹಿರಿಯರು ನಿರೋಕಳಿಯ ಹೊಂಡಕ್ಕೆ ಶನಿವಾರ ಸಂಜೆ ಪೂಜೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ಗ್ರಾಮದ ಮಹಿಳೆಯರು ಹಾಗೂ ಪುರುಷರು ಓಕಳಿಯನ್ನು ನೋಡಿ ಸಂತಸ ಪಟ್ಟರು.

ರಾಚಯ್ಯ ಹಿರೇಮಠ, ಶಿವಗೌಡ ಪಾಟೀಲ, ಚನ್ನಪ್ಪ ಮಗದುಮ್, ವಸಂತ ಪಾಟೀಲ, ಶಂಕರ ಮಳೆಣ್ಣವರ, ಶಿವಪ್ಪ ಮಗದುಮ, ಲಕ್ಷ್ಮಣ ಮಾಳಗೌಡ, ಸಿದ್ದಪ್ಪ ಮದರಖಂಡಿ ಮತ್ತು ಓಕಳಿ ಕಮಿಟಿಯ ಎಲ್ಲ ಹಿರಿಯರು ಹಾಗೂ ಸಮಸ್ತ ಯಲ್ಲಟ್ಟಿ ಗ್ರಾಮಸ್ಥರು ಭಾಗವಹಿಸಿದ್ದರು.



# ಜ್ಞಾನೋದಯ ಶಿಕ್ಷಣ ಸಂಘದ ಫಲಿತಾಂಶ ಶೇ.93.05

**ರಬಕವಿ–ಬನಹಟ್ಟಿ :** ರಾಮಪುರದ ಜ್ಞಾನೋದಯ ಶಿಕ್ಷಣ ಸಂಘದ ಕನ್ನಡ ಮಾಧ್ಯಮ ಅನುದಾನಿತ ಪ್ರೌಢಶಾಲೆಯ ಫಲಿತಾಂಶ ಶೇ. 93.05% ಆಗಿದೆ. ಒಟ್ಟು ಪರೀಕ್ಷೆಗೆ ಕುಳಿತವರು 72 ಜನ, ಉತ್ತೀರ್ಣರಾದವರು 67 ಜನ, ಅದರಲ್ಲಿ ಪವಿತ್ರಾ ಶಿವಾನಂದಬಳೋಲಗಿಡದ97.28%ಅಂಕದೊಂದಿಗೆ ಪ್ರಥಮ ಸ್ಥಾನ, ಬಿಂದು ರಾಜು ಸಜ್ಜನವರ 96% ಅಂಕ ಪಡೆದು ದ್ವಿತೀಯ, ರಾಜೇಶ್ವರಿ ರಾಮಪ್ಪ ಲೆಂಡಿ 94.88% ಅಂಕ ಪಡೆದು ತೃತೀಯ ಸ್ಥಾನ ಪಡೆದು ಶಾಲೆಗೆ ಕೀರ್ತಿ ತಂದಿದ್ದಾರೆ.

# ವಚನಗಳ ಮೂಲಕ ಬದುಕಿನ ದಾರಿ ತಿಳಿಸಿಕೊಟ್ಟರು ವಿಶ್ವಗುರು ಬಸವಣ್ಣ



**ಭಾಲ್ಕಿ :** ಭಾಲ್ಕಿ ತಾಲೂಕಿನ ಉಚ್ಚ ಗ್ರಾಮದ ಪೂಜ್ಯ ಶ್ರೀ ದಿವ್ಯಯೋಗಿ ಶ್ರೀ ಕಂಠಯ್ಯ ಸ್ವಾಮಿಗಳ ಲಿಂಗಯೋಗ ಧ್ಯಾನ ಮಂದಿರದಲ್ಲಿ ವಿಶ್ವಗುರು ಮಹಾಮಾನವತಾವಾದಿ, ಜಗಜ್ಯೋತಿ ಬಸವಣ್ಣನವರ 891ನೇ ಜಯಂತಿ ಉತ್ಸವ ಕಾರ್ಯಕ್ರಮ ಹಾಗೂ ಪೂಜ್ಯ ಶ್ರೀ ಕಂಠಯ್ಯ ಸ್ವಾಮಿಗಳ 97 ನೇ ಜಯಂತಿ ಉತ್ಸವ ಕಾರ್ಯಕ್ರಮ ದಿನಾಂಕ 11-05-2024ರಂದು ಜರುಗಿತು. ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಪೂಜ್ಯ ಶ್ರೀ ವೈಜನಾಥ ಮಹಾರಾಜರು ವಹಿಸಿದ್ದರು. ಭಕ್ತಿಯಲ್ಲಿಯೇ ದೇವರ ವಾಸ ಅಲ್ಲಿಯೇ ಯಶ ಲಭಿಸುವುದು. ಜೀವನ ಸಾಗಿಸಲು ಬೇಕಾದ ಅಂಶವನ್ನು ಬಸವಣ್ಣ ನಮಗೆ ಹೇಳಿಕೊಟ್ಟಿದ್ದಾರೆ ಅವರ ವಚನಗಳು ನಮ್ಮ ಬದುಕಿಗೆ ಆಧಾರ ಹಾಗೂ ದಾರಿ ದೀಪದಂತೆ ಕೆಲಸ ಮಾಡುತ್ತಿವೆ. ವಚನಗಳ ಮೂಲಕ ಬದುಕಿನ ದಾರಿ ತಿಳಿಸಿಕೊಟ್ಟರು ವಿಶ್ವಗುರು ಬಸವಣ್ಣ ಎಂದು ಹೇಳಿದರು. ಪೂಜ್ಯ ಶ್ರೀ ದಿವ್ಯಯೋಗಿ ಶ್ರೀ ಕಂಠಯ್ಯ ಸ್ವಾಮಿಗಳ 97ನೆಯ ಜಯಂತಿ ಉತ್ಸವ ನಿಮಿತ್ತ ಶ್ರೀಗಳ ಗದ್ದುಗೆ ಪೂಜೆ ನಡೆಯಿತು. ಶ್ರೀದೇವಿ ಸ್ವಾಮಿ ಬಸವ ಗುರು ಪೂಜೆ ನೆರವೇರಿಸಿದರು. ಶರಣ ಶ್ರೀ ಸಂತೋಷ ಹಡಪದ ಅವರು ಬಸವ ನಾಮಾವಳಿ ಜಪಿಸಿದರು. ಪೂಜ್ಯರು ಶಿವನಾಮ ಸ್ಮರಣೆ ಮಾಡಿದರು. ಸುನೀತಾ ಸ್ವಾಮಿ ಪ್ರಾರ್ಥನೆ ನೆರವೇರಿಸಿದರು. ಚಂದನ ಸ್ವಾಮಿ ಭಕ್ತಿ ಗೀತೆ ಹಾಡಿದರು. ಗುರು ಮಂತ್ರ ಪಠಣ, ಭಜನೆ, ಕೀರ್ತನೆಯೊಂದಿಗೆ ಪ್ರಸಾದ ವ್ಯವಸ್ಥೆ ಜರುಗಿತು. ಕಲಾವತಿ ಸ್ವಾಮಿ, ಅಮರ ಸ್ವಾಮಿ, ಶಿವಯೋಗಿ ಸ್ವಾಮಿ , ಸಿದ್ಧಲಿಂಗ ಸ್ವಾಮಿ ಇತರರು ಉಪಸ್ಥಿತಿದ್ದರು. ಮಂಗಲದೊಂದಿಗೆ ಕಾರ್ಯಕ್ರಮ ಸಂಪನ್ನವಾಯಿತು ಎಂದು ಶ್ರೀ ಶಾಂತಯ್ಯ ಸ್ವಾಮಿಗಳು ಅಧ್ಯಕ್ಷರು ಲಿಂಗಯೋಗ ಧ್ಯಾನ ಮಂದಿರ ಉಚ್ಚ ತಿಳಿಸಿದರು.

# ಕೆಎಲ್‌ಇ ಎಸ್‌ಸಿಪಿ ಪ್ರೌಢಶಾಲೆಗೆ ಶೇ.92.6 ಫಲಿತಾಂಶ



**ಮಹಾಲಿಂಗಪುರ :** ಸ್ಥಳಿಯ ಕೆಎಲ್‌ಇ ಸಂಸ್ಥೆಯ ಎಸ್‌ಸಿಪಿ ಪ್ರೌಢಶಾಲೆ ಈ ಬಾರಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.92.6 ಫಲಿತಾಂಶ ಪಡೆದಿದೆ. ರೂಪಾ ದಾನಗೊಂಡ 597 (ಶೇ.95.52) ಪ್ರಥಮ, ಚೈತ್ರಾ ದುಂದಗಾಂವಿ 579 (ಶೇ.92.64) ದ್ವಿತೀಯ, ಪ್ರೀತಿ ಚಿಪ್ಪಲಕಟ್ಟಿ 548 (ಶೇ.87.68) ತೃತೀಯ, ಸತ್ಯಪ್ಪ ಚನ್ನದಾಸರ 542 (86.72) ಚತುರ್ಥ, ಸವಿತಾ ನಾಡಗೌಡ 532 (ಶೇ.85.12) ಪಂಚಮ ಸ್ಥಾನ ಪಡೆದಿದ್ದಾರೆ. ಇಬ್ಬರು ವಿದ್ಯಾರ್ಥಿಗಳು ಹಿಂದಿ ವಿಷಯದಲ್ಲಿ ನೂರಕ್ಕೆ ನೂರು ಅಂಕ ಪಡೆದಿದ್ದಾರೆ ಎಂದು ಉಪಪ್ರಾಂಶುಪಾಲ ಬಿ.ಎನ್. ಅರಕೇರಿ ತಿಳಿಸಿದ್ದಾರೆ.

# ಢಪಳಾಪುರ ವಿದ್ಯಾವಿಹಾರ ಶಾಲೆ 100% ಫಲಿತಾಂಶ



**ಮಹಾಲಿಂಗಪುರ :** ಸಮೀಪದ ರನ್ನಬೆಳಗಲಿಯ ಢಪಳಾಪುರ ವಿದ್ಯಾವಿಹಾರ ಶಾಲೆ ಸನ್ 2023-24ನೇ ಸಾಲಿನ ಶಾಲೆಯ ಮೊದಲ ವರ್ಷದ ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳ ಫಲಿತಾಂಶವು 100% ಆಗಿದೆ. ಕಲ್ಮೇಶ ಬಾಗೇವಾಡಿ 578 ಪ್ರಥಮ, ವಿಜಯಲಕ್ಷ್ಮೀ ಬೆಳಕೂಡ 568 ದ್ವಿತೀಯ ಸ್ಥಾನ ಗಳಿಸಿದ್ದಾರೆ. ಹಿಂದಿ ವಿಷಯದಲ್ಲಿ ನೂರಕ್ಕೆ ನೂರು ಅಂಕಗಳನ್ನು ಪಡೆದುಕೊಂಡಿದ್ದಾಳೆ ಶಾಲೆಯ ಕಾರ್ಯದರ್ಶಿ ವಿವೇಕ ಢಳಾಪುರ ತಿಳಿಸಿದ್ದಾರೆ.

# ಪದ್ಮಾವತಿ ಪ್ರೌಢಶಾಲೆಗೆ ನೂರಕ್ಕೆ ನೂರರಷ್ಟು ಫಲಿತಾಂಶ



**ಹಾರೂಗೇರಿ :** ಸ್ಥಳೀಯ ಪದ್ಮಾವತಿ ಪ್ರೌಢಶಾಲೆಯ ಎಸ್ ಎಸ್ ಎಲ್ ಸಿ ಪರೀಕ್ಷೆ ಪಲಿತಾಂಶ ನೂರಕ್ಕೆ ನೂರರಷ್ಟಾಗಿದ್ದು ಪರೀಕ್ಷೆಗೆ ಕುಳಿತ 51 ಜನ ವಿದ್ಯಾರ್ಥಿಗಳಲ್ಲಿ 28 ಜನ ಅತ್ಯುನ್ನತ ಶ್ರೇಣಿ 23 ಜನ ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದು
1) ಪ್ರಿಯಾಂಕಾ ಶೀತಲ ಶಿರಹಟ್ಟಿ ಪ್ರಥಮ 609 (97.44%)
2) ಪ್ರಜ್ಞಾ ಬಾಹುಬಲಿ ದಟವಾಡ ದ್ವಿತೀಯ 608 (97.28%)
3) ಭರತೇಶ್ ಸುಭಾಸ ವಟಗೂಡೆ ತೃತೀಯ 605 (96.08 % ) ಅಂಕ ಪಡೆದುಕೊಂಡಿದ್ದು ಈ ವಿದ್ಯಾರ್ಥಿಗಳಿಗೆ ಇಲ್ಲಿಯ ಗಣ್ಯ ವ್ಯಾಪಾರಸ್ಥರಾದ ಮಲ್ಲಿನಾಥ ಹುಕ್ಕೇರಿ ಅವರು ಕ್ರಮವಾಗಿ 5,000/-, 2,500/-, 2,100 /- ಬಹುಮಾನವನ್ನು ನೀಡಿದ್ದಾರೆ. ಸತತ 19 ವರ್ಷಗಳಿಂದ ಶಾಲೆಯ ಎಸ್.ಎಸ್.ಎಲ್.ಸಿ. ಫಲಿತಾಂಶ 100 ಕ್ಕೆ 100 ರಷ್ಟಾಗಿದ್ದು ಪರೀಕ್ಷೆಯಲ್ಲಿ ತೇರ್ಗಡೆಯಾದ ಎಲ್ಲಾ ವಿದ್ಯಾರ್ಥಿಗಳನ್ನು ಮುಖ್ಯೋಪಾಧ್ಯಾಯರಾದ ಆರ್. ಎಸ್. ಜಾಧವ್ ಹಾಗೂ ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀ ಪ್ರಮಥ ಎಸ್. ದಟವಾಡ ಅವರು ಅಭಿನಂದಿಸಿದ್ದಾರೆ.

# ಎಸ್.ಜೆ. ಪ್ರೌಢಶಾಲೆ ಶೇ. 99ರಷ್ಟು ಫಲಿತಾಂಶ



**ತೇರದಾಳ :** ಇಲ್ಲಿನ ಜೆವಿ ಮಂಡಳದ ಎಸ್.ಜೆ. ಹೆಣ್ಣು ಮಕ್ಕಳ ಪ್ರೌಢಶಾಲೆಯ ಎಸ್ಸೆಸ್ಸೆಲ್ಸಿ ವಾರ್ಷಿಕ ಪರೀಕ್ಷೆ ಫಲಿತಾಂಶ ಶೇಕಡಾ 99ರಷ್ಟು ಆಗಿದೆ.
ಪರೀಕ್ಷೆಗೆ ಹಾಜರಾದ 65 ವಿದ್ಯಾರ್ಥಿನಿಯರ ಪೈಕಿ 64 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. 13 ಡಿಸ್ಟಿಂಕ್ಷನ್, 15 ಪ್ರಥಮ ಶ್ರೇಣಿ 28 ದ್ವಿತೀಯ ಮತ್ತು 8 ವಿದ್ಯಾರ್ಥಿನಿಯರು ತೃತೀಯ ಶ್ರೇಣಿಯಲ್ಲಿ ಪಾಸಾಗಿದ್ದಾರೆ. ಇವರಲ್ಲಿ ಅನು ನಾಯಕ 608(97.28)ರಷ್ಟು ಅಂಕ ಪಡೆದು ಪ್ರಥಮ ಸ್ಥಾನ ಪಡೆದುಕೊಂಡಿದ್ದಾಳೆ. ಅದರಂತೆ ಸುಮಿತ್ರಾ ಅಂಬಲಿ ಹಾಗೂ ಜ್ಯೋತಿ ಮುದಕನ್ನವರ 606(96.96) ಅಂಕ ಗಳಿಸಿ ದ್ವಿತೀಯ ಸ್ಥಾನ ಮತ್ತು ಕಾವ್ಯಾ ದೊಡ್ಡಶಿವನ್ನವರ 595(95.20) ಅಂಕ ಪಡೆದು ತೃತೀಯ ಸ್ಥಾನ ಪಡೆದುಕೊಂಡಿದ್ದಾಳೆ ಎಂದು ಮುಖ್ಯಗುರುಮಾತೆ ಎಸ್.ಎನ್. ಹೆಬ್ಬಾಳೆ ತಿಳಿಸಿದ್ದಾರೆ.




**ರಾಯಬಾಗ ತಾಲೂಕಿನ ಹಾರೂಗೇರಿ ಪೋಲೀಸ್ ಠಾಣೆಯ ಪಿ.ಎಸ್.ಐ. ಗಿರಿಮಲ್ಲಪ್ಪ ಉಪ್ಪಾರ ಅವರ ನಾಲ್ಕು ವರ್ಷದ ಪುತ್ರ ಬಸವಜಯಂತಿ ದಿನದಂದು ಬಾಲ ಬಸವನಾಗಿ ವೇಷಭೂಷಣ ಸ್ಪರ್ಧೆಯಲ್ಲಿ ಭಾಗವಹಿಸಿದ್ದಾಗ ತೆಗೆದ ಚಿತ್ರ.**

# ತಮದಡ್ಡಿ ಪ್ರತಿಕ್ಷಾಗೆ 613 ಅಂಕ

**ತೇರದಾಳ :** ತಮದಡ್ಡಿ ಗ್ರಾಮದ ಸರಕಾರಿ ಪ್ರೌಢಶಾಲೆ ಎಸ್ಸೆಸ್ಸೆಲ್ಸಿ ವಾರ್ಷಿಕ ಪರೀಕ್ಷೆ ಫಲಿತಾಂಶ ಉತ್ತಮವಾಗಿದೆ.
ಪ್ರತಿಕ್ಷಾ ಜಮಖಂಡಿ 613(98.08)ರಷ್ಟು ಅಂಕ ಪಡೆದು ಪ್ರಥಮ ಸ್ಥಾನ ಗಿಟ್ಟಿಸಿಕೊಂಡಿದ್ದಾಳೆ. ಸಮರ್ಥ ಗೂಳಗೊಂಡ 606(96.96) ದ್ವಿತೀಯ ಹಾಗೂ ಗೌರವ್ವ ದಳವಾಯಿ 600(96%) ಅಂಕ ಪಡೆದು ತೃತೀಯ ಸ್ಥಾನ ಪಡೆದುಕೊಂಡಿದ್ದಾಳೆ. ಕನ್ನಡ ವಿಷಯಕ್ಕೆ 125ಕ್ಕೆ 125 5 ವಿದ್ಯಾರ್ಥಿಗಳು, ಇಂಗ್ಲೀಷ್ 100ಕ್ಕೆ 100 ಇಬ್ಬರು, ಸಮಾಜ ವಿಜ್ಞಾನ ವಿಷಯಕ್ಕೆ ಮೂರು ಹಾಗೂ ಹಿಂದಿ, ಗಣಿತ ಮತ್ತು ವಿಜ್ಞಾನ ವಿಷಯಕ್ಕೆ ತಲಾ ಒಬ್ಬ ವಿದ್ಯಾರ್ಥಿ ನೂರಕ್ಕೆ ನೂರು ಅಂಕ ಪಡೆದುಕೊಂಡಿದ್ದಾನೆ ಎಂದು ಶಾಲೆಯ ಮುಖ್ಯಗುರುಮಾತೆ ಹೊಂಗಲ್ ತಿಳಿಸಿದ್ದಾರೆ.



# ಮಾತೃದೇವೋ ಭವ



**'ಮಾತ್ರಾಸಮಂ ನಾಸ್ತಿ ಶರೀರಪೋಷಣಂ**
**ಚಿಂತಾಸಮಂ ನಾಸ್ತಿ ಶರೀರಶೋಷಣಂ**
**ಭಾರ್ಯಾಸಮಂ ನಾಸ್ತಿ ಶರೀರತೋಷಣಂ**
**ವಿದ್ಯಾಸಮಂ ನಾಸ್ತಿ ಶರೀರಭೂಷಣಂ?**

**ಅರ್ಥಾತ್ ಜಗತ್ತಿನಲ್ಲಿ ತಾಯಿ ಮಾಡಿದಷ್ಟು** ನಮ್ಮ ಶರೀರದ ಆರೈಕೆಯನ್ನು ಬೇರೆ ಯಾರಿಂದಲೂ ಮಾಡಲು ಸಾಧ್ಯವೇ ಇಲ್ಲ. ಹಾಗಾಗಿ ನಮ್ಮ ಭಾರತೀಯ ಸಂಸ್ಕೃತಿಯಲ್ಲಿ "ಮಾತೃದೇವೋ ಭವ" ಅಂದರೆ ತಾಯಿಯನ್ನು ದೇವರಿಗೆ ಸಮನಾಗಿ ಪೂಜಿಸಲಾಗುತ್ತದೆ. ತಾಯಿಗಿಂತ ಮಿಗಿಲಾದ ದೇವರಿಲ್ಲ ಎಂಬುವ ನಂಬಿಕೆ ಕೂಡ ಇದೆ. ಹಾಗಾಗಿ ಅನೇಕ ಸಾಹಿತಿಗಳು ಅಮ್ಮನನ್ನು ವಿವಿಧ ರೀತಿಯಲ್ಲಿ ಬಣ್ಣಿಸಿದ್ದಾರೆ. ಜಿ.ಎಸ್.ಶಿವರುದ್ರಪ್ಪನವರು ನಿನಗೆ ಬೇರೆ ಹೆಸರು ಬೇಕೆ?
ಸ್ತ್ರೀ ಎಂದರೆ ಅಷ್ಟೇ ಸಾಕೆ? ಎಂದರೆ, ಮತ್ತೊಬ್ಬರು ಮಗುವಿನ ಮೊದಲ ತೊದಲ್ನುಡಿಯೇ ಅಮ್ಮ ಎಂದಿದ್ದಾರೆ. ಮಗುವಿನ ಬಾಳಿನಲ್ಲಿ ತಂದೆ ತಾಯಿ ಇಬ್ಬರು ಮುಖ್ಯವಾದರೂ ತಾಯಿಯ ಕಡೆಗೆ ಹೆಚ್ಚಿನ ಒಲವು, ಪ್ರೀತಿ ಮತ್ತು ಸ್ಪಂದನೆಯನ್ನು ಮಕ್ಕಳಲ್ಲಿ ಕಾಣಬಹುದು.
ಅಮ್ಮ, ಆಯಿ, ಅಬ್ಬೆ, ಮಮ್ಮಿ ಹೀಗೆ ವಿವಿಧ ನಾಮಧೇಯಗಳಿಂದ ಗುರುತಿಸಲ್ಪಡುವ ಅಮ್ಮನಿಗಾಗಿ ಒಂದು ದಿನವನ್ನು ಮೀಸಲಾಡಲಾಗಿದೆ. ಅದೇ ಮದರ್ಸ್ ಡೇ ಅಥವಾ ತಾಯಂದಿರ ದಿನ. ಈ ತಾಯಂದಿರ ದಿನದ ಆಚರಣೆಯ ಹಿನ್ನೆಲೆಯನ್ನು ಕೆದಕಿ ನೋಡಿದಾಗ ಇದು ಅಮೇರಿಕಾ ಮೂಲದಿಂದ ಬಂದ ಆಚರಣೆ ಎಂದು ತಿಳಿಯುತ್ತದೆ. ಅಮೆರಿಕದ ಅವಿವಾಹಿತೆ ಶಾಂತಿ ಕಾರ್ಯಕರ್ತೆ ಅನಾ ಜಾರ್ವಿಸ್ ತನ್ನ ತಾಯಿಯನ್ನು ಬಹಳ ಪ್ರೀತಿಸುತ್ತಿದ್ದಳು. 1905ರಲ್ಲಿ ಅನಾಳ ತಾಯಿ ಇಹ ತ್ಯಜಿಸಿದರು. ತನ್ನ ತಾಯಿಯ ಮೇಲೆ ತಾನು ಹೊಂದಿದ್ದ ಪ್ರೀತಿಯನ್ನು ವ್ಯಕ್ತಪಡಿಸಲು ಅನಾ ಮೇ ತಿಂಗಳ ಎರಡನೇ ಭಾನುವಾರ ದಿನವನ್ನು ಮದರ್ಸ್ ಡೇ ಎಂದು ಆಚರಣೆ ಮಾಡಲು ಪ್ರಾರಂಭಿಸಿದಳು. 1908ರಲ್ಲಿ ಇಡೀ ಅಮೆರಿಕದಲ್ಲಿ ಮದರ್ಸ್ ಡೇ ಆಚರಿಸಲು ನಿರ್ಧರಿಸಲಾಯಿತು. ಅಮೆರಿಕದ ಅಧ್ಯಕ್ಷರಾಗಿದ್ದ ವುಡ್ರೋ ವಿಲ್ಸನ್ ಮೇ 9, 1914 ರಂದು ಪ್ರತಿ ವರ್ಷ ಮೇ ತಿಂಗಳ ಎರಡನೇ ಭಾನುವಾರದಂದು ತಾಯಂದಿರ ದಿನ ಎಂದು ಆಚರಿಸಲು ಕಾನೂನನ್ನು ಸಹ ಜಾರಿಗೊಳಿಸಿದರು. ನಂತರ ಜಗತ್ತಿನ ಬಹುತೇಕ ರಾಷ್ಟ್ರಗಳು ಅಮ್ಮಂದಿರ ದಿನವನ್ನು ಆಚರಿಸಲು ಪ್ರಾರಂಭಿಸಿದವು. ಔದ್ಯೋಗಿಕ ಕ್ರಾಂತಿ, ವ್ಯಾಪಾರೀಕರಣದಿಂದಾಗಿ ತಾಯಂದಿರ ದಿನ ಹೆಚ್ಚು ಪ್ರಸಿದ್ಧಿಯಾಯಿತು. ಈ ಒಂದು ದಿನವಾದರೂ ಮಕ್ಕಳು ತಾಯಂದಿರಿಗೆ ಉಡುಗೊರೆ ಖರೀದಿಸಿ ನೀಡುವುದು, ಅಮ್ಮನ ಬಗ್ಗೆ ಪುಸ್ತಕ, ಲೇಖನ ಬರೆಯುವುದು ಅಥವಾ ಖರೀದಿಸಿ ಕೊಡುವುದು. ಸಂದರ್ಶನ ನಡೆಸುವುದು ಮತ್ತು ಅಮ್ಮಂದಿರಗಾಗಿಯೇ ಅನೇಕ ಸ್ಪರ್ಧೆಗಳನ್ನು ಏರ್ಪಡಿಸಿ, ಅದರ ಮುಖಾಂತರ ತಾಯಿಗೆ ಧನ್ಯವಾದಗಳನ್ನು ಸೂಚಿಸುವ ಹಬ್ಬವಾಗಿ ಇಂದು ತಾಯಂದಿರ ದಿನ ಪ್ರಚಲಿತವಾಗಿದೆ.
ಈ ದಿನದಂದು ನಡೆಯುವ ದೂರವಾಣಿ ಸಂಭಾಷಣೆಗಳು ಇಡೀ ವರುಷದಲ್ಲೇ ಅತಿ ಹೆಚ್ಚು ಎಂದು ಹೇಳಲಾಗುತ್ತದೆ. ಕಾಲ್ ಟ್ರಾಫಿಕ್ ಶೇ 37% ರಷ್ಟು ಹೆಚ್ಚುತ್ತದೆ ಎಂದು ಅಂದಾಜು ಮಾಡಲಾಗಿದೆ. ಅಮ್ಮಂದಿರ ದಿನದ ಮಹತ್ವವನ್ನು ವಾಣಿಜ್ಯ ಸಂಸ್ಥೆಗಳು ಉಡುಗೊರೆ, ಕಾರ್ಡ್ ಮೂಲಕ ಅಳೆಯುವುದು ಎಲ್ಲರಿಗೂ ಅಸಮಾಧಾನವಿದೆ. ಪ್ರತಿದಿನವೂ ಅಮ್ಮನ ದಿನವೇ ಆಗಿದ್ದು, ಇವತ್ತೊಂದೇ ದಿನ ಅಮ್ಮನ ದಿನವೇ ಎಂದು ವ್ಯಂಗ್ಯ ನುಡಿಯುವವರು ಇದ್ದಾರೆ. ಋತುಮಾನ ಬದಲಾದಾಗ ಯುಗಾದಿ ಹಬ್ಬ ಬರುತ್ತದೆಯೇ ಹೊರತು ದಿನ ನಿತ್ಯ ಪ್ರಕೃತಿಯಲ್ಲಿ ಬದಲಾವಣೆ ಆಗುತ್ತದೆಂದು ಪ್ರತಿದಿನ ಯುಗಾದಿ ಹಬ್ಬ ಆಚರಿಸುವುದಿಲ್ಲ. ಹಾಗೆಯೇ ಪ್ರತಿದಿನ ಹಬ್ಬವೆಂದು ಹೋಳಿಗೆ ಊಟವನ್ನು ಮಾಡಲು ಸಾಧ್ಯವೇ.. ಇಲ್ಲವಲ್ಲ. ಹಾಗೆಯೇ ವರುಷಕ್ಕೆ ಕೊನೆಯ ಪಕ್ಷ ಒಂದು ದಿನವಾದರೂ ಮಕ್ಕಳಿಗೆ ತಾಯಂದಿರ ನೋವು, ಕಷ್ಟ, ತ್ಯಾಗದ ಅರಿವಾಗವಲಿ, ಆಕೆಗೆ ಅಡುಗೆ ಮನೆಯಿಂದ ಕೆಲ ಸಮಯವಾದರೂ ಬಿಡುಗಡೆ ನೀಡಿ, ಹೊರಗಡೆ ಕರೆದುಕೊಂಡು ಹೋಗುವುದು, ಆಕೆಗೆ ಇಷ್ಟವಾದ ಉಡುಗೊರೆ ನೀಡುವುದು. ಆಕೆಯೊಂದಿಗೆ ಸ್ವಲ್ಪಮಟ್ಟಿಗಾದರೂ ಸಮಯ ಕಳೆಯುವುದು ಒಳ್ಳೆಯದಲ್ಲವೇ?



**ಅಮ್ಮ ಎಂದರೆ ಏನೋ ಹರುಷವು**
**ನಮ್ಮಾ ಪಾಲಿಗೆ ಅವಳೇ ದೈವವು**
**ಅಮ್ಮಾ ಎನ್ನಲೂ ಎಲ್ಲಾ ಮರೆತೆವು**
ಎಂದೂ ಕಾಣದಾ ಸುಖವಾ ಕಂಡೆವು..

ಎಷ್ಟೊಂದು ಅರ್ಥಪೂರ್ಣವಾಗಿದೆಯಲ್ಲವೇ? ಮಾತೃತ್ವ ಸ್ತ್ರೀಗೆ ಸಹಜವಾಗಿ ಕೊಡಮಾಡುವ ವಾತ್ಸಲ್ಯ, ಕರುಣೆ, ಸಹನೆ, ಕ್ಷಮೆ, ತ್ಯಾಗ, ಪೋಷಣೆ, ಆರೈಕೆ ಗುಣಗಳಿಂದಾಗಿ, ತನ್ನ ವೈಯಕ್ತಿಕ ಆಸೆ, ಆಕಾಂಕ್ಷೆ ,ಕನಸು, ಹಕ್ಕು, ಸಾಧನೆಗಳಿಗಿಂತ ತನ್ನ ಮಕ್ಕಳ ಸಂರಕ್ಷಣೆ, ಒಳಿತು, ಶ್ರೇಯಸ್ಸೇ ಪ್ರಥಮ ಆದ್ಯತೆಯೆಂದು ತಿಳಿದ ಕಾರಣ ಮಕ್ಕಳ ಹೃನ್ಮನಗಳಲ್ಲಿ ಅನನ್ಯವಾದ, ಅತ್ಯಾಪ್ತವಾದ ಸ್ಥಾನವನ್ನು ಆಕೆ ಪಡೆದುಕೊಂಡಿದ್ದಳು. ಆದರೆ ಕಾಲಕ್ಕೆ ತಕ್ಕಂತೆ ಅಮ್ಮನು ನಿರ್ವಹಿಸುವ ಪಾತ್ರಗಳು ಬದಲಾಗಿವೆ. ಆಡಿ ಬಾ ನನ್ನ ಕಂದ, ಅಂಗಾಲ ತೊಳೆದೇನು ತೆಂಗಿನ ಕಾಯಿ ತಿಳಿನೀರ, ತೆಂಗಿನ ಕಾಯಿ ತಿಳಿನೀರ ತಕ್ಕೊಂಡು ಬಂಗಾರದ ಮೊರೆ ತೊಳೆದೇನಾ ಎಂದು ನಮ್ಮಜ್ಜಿ ಕಾಲದಲ್ಲಿ ಹೇಳುತ್ತಿದ್ದರು. ಆಗ ಅವರ ಸಂಪೂರ್ಣ ಸಮಯವು ಮಕ್ಕಳ ಆರೈಕೆ ಮತ್ತು ಮನೆಯೊಳಗಿನ ಕೆಲಸಕ್ಕೆ ಮಾತ್ರ ಸಿಮೀತವಾಗಿತ್ತು. ಆದರೆ ನಂತರದ ತಾಯಂದಿರು ಓದುವುದು, ಪದವಿ ಪಡೆಯುವುದರತ್ತ ಚಿತ್ತ ಹರಿಸಿದರು. ಅಡುಗೆ ಮನೆ ಸಾಮ್ರಾಜ್ಯದಿಂದ ಅಂಬೆಗಾಲಿಡುತ್ತ ಹೊರಗೆ ಬಂದರು. ನಂತರದಲ್ಲಿ ಪುರುಷರಿಗೆ ಸಮಾನವಾಗಿ ಹೆಗಲುಕೊಟ್ಟು ದುಡಿಯಲಾರಂಭಿಸಿದರು. ತಮ್ಮದೇ ಹೊಸ ಸಾಮ್ರಾಜ್ಯವನ್ನು ಕಟ್ಟಲು ಶುರುಮಾಡಿದರು. ಇಂದು ಅವರ ಕಾರ್ಯಕ್ಷೇತ್ರ ಅಡುಗೆ ಮನೆಗೆ ಸೀಮಿತವಾಗದೇ ಎಲ್ಲಾ ಕ್ಷೇತ್ರಗಳಲ್ಲೂ ವ್ಯಾಪಕವಾಗಿ ಹಬ್ಬಿದೆ. ಇಂದಿನ ಮಹಿಳೆಯರಿಗೆ ಮದುವೆ ಮತ್ತು ಮಕ್ಕಳ ಆರೈಕೆಗಿಂತ ವೃತ್ತಿ ಜೀವನ, ಸ್ವಾವಲಂಬನೆ ಮತ್ತು ಆರ್ಥಿಕ ಸ್ವಾತಂತ್ರ್ಯ ಮುಖ್ಯವಾಗಿದೆ. ಹಾಗಾಗಿ ಇಂದಿನ ತಾಯಂದಿರಿಗೆ ಮಗುವನ್ನು ಸಾಕುವ ಮನಸ್ಸಿದೆ, ಆದರೆ ಅದಕ್ಕೆ ಸಮಯವಿಲ್ಲ ಎನ್ನುವುದು ಕಹಿ ಸತ್ಯ.
ಮಕ್ಕಳೇ ತನಗೆಲ್ಲ, ಬೇರೇನೂ ಬೇಕಿಲ್ಲ' ಎಂದು ತಾಯ್ತನದಲ್ಲಿಯೇ ಕೃತಾರ್ಥತೆಯನ್ನು ಅನುಭವಿಸುತ್ತ ಮಕ್ಕಳ ಸುಖ ಸಂತೋಷಗಳಲ್ಲಿಯೇ ಸಕಲ ಸೌಭಾಗ್ಯವನ್ನು ಕಂಡುಕೊಳ್ಳುವ ತ್ಯಾಗಮಯಿ ತಾಯಿ ಹಿಂದಿನ ದಶಕಗಳಲ್ಲಿ ಕಾಣಿಸುತ್ತಿದ್ದಳು. ಆದರೆ ಇಂದಿನ ಮಹಿಳೆ ಮಹತ್ವಾಕಾಂಕ್ಷಿ ಆಗಿದ್ದಾಳೆ. ತನ್ನ ಉದ್ಯೋಗ ನಿರ್ವಹಣೆ, ಅದರಲ್ಲಿ ಮುನ್ನಡೆ ಸಾಧಿಸುವುದಕ್ಕೆ, ಮದುವೆ ಮಕ್ಕಳು ಅಡ್ಡಿಯಾಗಬಲ್ಲರು ಎಂದು ಭಾವಿಸತೊಡಗಿದ್ದಾರೆ. ಇದರಿಂದ ಮದುವೆ ಆಗದೇ ಇರಲು ಬಯಸುವ ಮತ್ತು ಮದುವೆಯಾದರೂ ಮಕ್ಕಳು ಬೇಡ ಎನ್ನುವ ಹೆಣ್ಣು ಮಕ್ಕಳ ಸಂಖ್ಯೆ ಹೆಚ್ಚುತ್ತಲಿದೆ. ಹಾಗಾಗಿ ಹಿಂದೂಗಳ ಜನಸಂಖ್ಯೆಯು ಗಣನೀಯ ಪ್ರಮಾಣದಲ್ಲಿ ಇಳಿಕೆಯಾಗುತ್ತಿದೆ. ಇಂದಿನ ಮಹಿಳೆಯರಿಗೆ "ಮಾತೃತ್ವ' ಎನ್ನುವುದು "ಪರಮ ಸೌಭಾಗ್ಯ' ಎಂದೆನಿಸುವುದಿಲ್ಲ. ಹೆತ್ತವರು ತೋರಿಸಿದ ಯಾವ ಹುಡುಗನನ್ನಾದರೂ ಸರಿಯೆ, ಕಟ್ಟಿಕೊಂಡು ತಾನು "ಹೆರುವ ಯಂತ್ರ'ವಾಗಲು ಆಕೆ ಒಪ್ಪುವುದಿಲ್ಲ. ತನಗೆ ಅನುರೂಪನಾದ ಜೀವನ ಸಂಗಾತಿ ಸಿಗದೇ ಹೋದರೆ ಜೀವನ ಪರ್ಯಂತ ಒಂಟಿಯಾಗಿರಲು ಕೂಡ ಆಕೆ ಹೆದರುವುದಿಲ್ಲ. ಅಮ್ಮ ಎನ್ನುವ ಜೀವವಾಗಲಿ, ಕರುಳ ಕುಡಿಗಳ ಪ್ರತಿ ಆಕೆಯ ಮನದ ಭಾವವಾಗಲಿ ಎಂದೂ ಬದಲಾಗುವುದಿಲ್ಲ. ಇಂದಿನ ಅಮ್ಮ ಸ್ಪರ್ಧಾ ಜಗತ್ತಿನ ಅಮ್ಮನಾಗಿದ್ದಾಳೆ. ವಿವಾಹದ ನಂತರ ಸಂಸಾರದಲ್ಲಿ ಹೊಂದಾಣಿಕೆ ಇಲ್ಲವೆಂದು ಆಕೆಗೆ ಖಚಿತವಾದರೆ ಮಕ್ಕಳಿರಲಿ, ಇಲ್ಲದಿರಲಿ ದಾಂಪತ್ಯದಲ್ಲಿ ದಿನನಿತ್ಯ ನೋವು ಅನುಭವಿಸಲು' ಆಕೆ ಸಿದ್ಧಳಿಲ್ಲ. ತನ್ನತನ, ತನ್ನ ಆಸೆ, ಆಕಾಂಕ್ಷೆಗಳು, ಕನಸುಗಳನ್ನು ಆಕೆ ನುಚ್ಚುನೂರು ಮಾಡುತ್ತಿಲ್ಲ. ವಿಚ್ಛೇದನ ಮತ್ತು ಪುನರ್ವಿವಾಹದ ಕುರಿತು ಕೂಡ ಯೋಚಿಸುತ್ತಾಳೆ.
ಒಟ್ಟಿನಲ್ಲಿ ಇಂದಿನ ಮಹಿಳೆಗೆ "ತಾಯ್ತನ' ಎನ್ನುವುದು ಪ್ರಕೃತಿಯಿಂದ ತನಗೆ ದೊರೆತಿರುವ ವಿಶಿಷ್ಟ ವರ ಎನ್ನುವ ಅಭಿಮಾನವಾಗಲಿ, ಅದನ್ನು ಸಾಕಾರಗೊಳಿಸುವುದರಲ್ಲಿ ಅನನ್ಯವಾದ ಆನಂದವಿದೆ ಎನ್ನುವುದಾಗಲಿ ಇಲ್ಲ. ಇದಕ್ಕೆ ವ್ಯತಿರಿಕ್ತವಾಗಿ ಮದುವೆ ಮತ್ತು ಮಕ್ಕಳು ಎಂಬುವ ಜವಾಬ್ದಾರಿ ತನ್ನ ಸುಖ ಸ್ವಾತಂತ್ರ್ಯಗಳನ್ನು ಕಸಿದುಕೊಳ್ಳುವ ಸಮಾಜದ ಕಟ್ಟುಪಾಡು ಎಂದು ಭಾವಿಸುತ್ತಿದ್ದಾಳೆ. ಮಕ್ಕಳು ಆಕೆಯ ಜೀವನದಲ್ಲಿ ಪ್ರಪ್ರಥಮ ಆದ್ಯತೆಯ ಸ್ಥಾನವನ್ನು ಕ್ರಮೇಣವಾಗಿ ಕಳೆದುಕೊಳ್ಳುತ್ತಿದ್ದಾರೆ. ಹಾಗೆಯೇ ಅಮ್ಮನ ವ್ಯಕ್ತಿತ್ವದಲ್ಲಿಯೂ ಬದಲಾವಣೆಯ ಗಾಳಿ ಬೀಸುತ್ತಿದೆ. ಏನೇ ಬದಲಾವಣೆ ಆಗು ಹೋಗುಗಳ ನಡುವೆಯೂ ಜನ್ಮ ನೀಡಿದ ತಾಯಿಗೆ ಕೃತಜ್ಞತಾಪೂರ್ವಕವಾಗಿ ಕನಿಷ್ಠಪಕ್ಷ ಒಂದು ದಿನವಾದರೂ ಶುಭಾಶಯಗಳನ್ನು ಕೋರಿ ಆಶೀರ್ವಾದ ಪಡೆಯೋಣವೇ!!

* * *



ಲತಾ ಕೆ.ಎಸ್.ಹೆಗಡೆ
**ಬೆಂಗಳೂರು**

# ಜೆಸಿ ಆಂಗ್ಲ ಮಾಧ್ಯಮ ಶಾಲೆ 92% ಫಲಿತಾಂಶ




**ಮಹಾಲಿಂಗಪುರ :** ಸ್ಥಳೀಯ ನವಚೇತನ ಶಿಕ್ಷಣ ಸಂಸ್ಥೆಯ ಜೆಸಿ ಆಂಗ್ಲ ಮಾಧ್ಯಮ ಪ್ರೌಢ ಶಾಲೆಯು 2023-24ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.92ರಷ್ಟು ಫಲಿತಾಂಶ ಪಡೆದಿದೆ. ಪರೀಕ್ಷೆಗೆ ಕುಳಿತ 56 ವಿದ್ಯಾರ್ಥಿಗಳಲ್ಲಿ 51 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಸಾದಿಕ್ ಬರಗಿ 570 ಅಂಕಗಳು ಪ್ರಥಮ, ಜೀವನ್ ಗುಳದಳ್ಳಿ 529 ಅಂಕಗಳು ದ್ವಿತೀಯ, ಜಗದೀಶ ನಾಗನೂರ 528 ತೃತೀಯ ಸ್ಥಾನ ಪಡೆದಿದ್ದಾರೆ ಶಾಲೆಯ ಮುಖ್ಯಗುರುಗಳಾದ ಎಸ್.ಜಿ.ಕೌಜಲಗಿ ತಿಳಿಸಿದ್ದಾರೆ.

# ಗುರವ್ವ ಕುಲಗೋಡ ನಿಧನ



**ರಬಕವಿ-ಬನಹಟ್ಟಿ :** ಬನಹಟ್ಟಿಯ ವೈಭವ ಚಿತ್ರಮಂದಿರ ಬಳಿ ನಿವಾಸಿ ಗುರವ್ವ ಕುಲಗೋಡ(73) ನಿಧನರಾದರು. ಮೃತರಿಗೆ ಇಬ್ಬರು ಪುತ್ರರು ಹಾಗು ಓರ್ವ ಪುತ್ರಿ ಸೇರಿದಂತೆ ಅಪಾರ ಬಳಗವಿದೆ.

# ಮುರಲೀಧರ ಆರ್. ಕೊಣ್ಣೂರ ನಿಧನ



**ಜಮಖಂಡಿ :** ನಗರದ ಸಿದ್ದರಾಮೇಶ್ವರ ಕಾಲನಿ ನಿವಾಸಿ, ನಿವೃತ್ತ ಶಿಕ್ಷಕ ಮುರಲೀಧರ ಆರ್. ಕೊಣ್ಣೂರ (83) ನಿಧನರಾದರು. ಮೃತರು ಪತ್ನಿ ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ.

# ಪ್ರಥಮ ರ್‍ಯಾಂಕ ಪಡೆದ ವಿದ್ಯಾರ್ಥಿನಿ ಅಂಕಿತಾಗೆ ಸನ್ಮಾನ



**ಜಮಖಂಡಿ :** ಪ್ರಸಕ್ತ ವರ್ಷದ ಎಸ್.ಎಸ್.ಎಲ್.ಸಿ. ಪರೀಕ್ಷೆ ಫಲಿತಾಂಶದಲ್ಲಿ 625ಕ್ಕೆ 625 ಅಂಕ ಪಡೆದು ರಾಜ್ಯಕ್ಕೆ ಪ್ರಥಮ ರ್‍ಯಾಂಕ ಪಡೆದ ಬಾಗಲಕೋಟಯ ಮುಧೋಳ ತಾಲೂಕಿನ ವಜ್ಜರಮಟ್ಟಿ ಗ್ರಾಮದ ಅಂಕಿತಾ ಬಸಪ್ಪ ಕೊಣ್ಣೂರ ವಿದ್ಯಾರ್ಥಿನಿಯನ್ನು ಶಾಸಕ ಆನಂದ ಸಿದ್ದು ನ್ಯಾಮಗೌಡ ಸನ್ಮಾನಿಸಿದರು.

ಶುಕ್ರವಾರ ಶಾಸಕ ಆನಂದ ಸಿದ್ದು ನ್ಯಾಮಗೌಡ ಅವರು ವಿದ್ಯಾರ್ಥಿನಿ ಅಂಕಿತಾ ಬಸಪ್ಪ ಕೊಣ್ಣೂರ ಅವರ ಸ್ವಗ್ರಾಮ ವಜ್ಜರಮಟ್ಟಿ ಗ್ರಾಮಕ್ಕೆ ತೆರಳಿ ವಿದ್ಯಾರ್ಥಿನಿ ಜೊತೆಗೆ ಸಂವಾದ ನಡೆಸಿದ ನಂತರ ಮುಂದಿನ ಶೈಕ್ಷಣಿಕ ಮಾಹಿತಿ ಹಂಚಿಕೊಂಡರು.

ಇದೇ ಸಂದರ್ಭದಲ್ಲಿ ಹಿರಿಯ ನ್ಯಾಯವಾದಿ ಎನ್.ಎಸ್.ದೇವರವರ, ಅರ್ಬನ ಬ್ಯಾಂಕ ನಿರ್ದೇಶಕ ಧರೆಪ್ಪ ತೇಲಿ ಸಹಿತ ಇಂಗಳಗಿ, ವಜ್ಜರಾಮಟ್ಟಿ, ಬರಗಿ ಚಿಚಕಂಡಿ ಗ್ರಾಮಸ್ಥರು ಇದ್ದರು.



ಅಬಕಾರಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವಾದ ಆರ್.ತಿಮ್ಮಾಪೂರ ಅವರು ನಗರದ ಬಸವೇಶ್ವರ ವೃತ್ತದಲ್ಲಿರುವ ವಿಶ್ವಗುರು ಬಸವಣ್ಣನನವರ ಪುತ್ಥಳಿಗ ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಿದರು. ಈ ಸಂದರ್ಭದಲ್ಲಿ ಕಾಂಗ್ರೆಸ್ ಎಸ್.ಸಿ.ಘಟಕದ ಜಿಲ್ಲಾಧ್ಯಕ್ಷ ರಾಜು ಮನ್ನಿಕೇರಿ, ಕರ್ನಾಟಕ ರಕ್ಷಣಾ ವೇದಿಕೆಯ ಜಿಲ್ಲಾಧ್ಯಕ್ಷ ಬಸವರಾಜ ಧರ್ಮಂತಿ, ಸುರೇಶ ನಂದಿ, ಅಡಿವೆಪ್ಪ ಚಂದಾವರಿ, ಗ್ಯಾನಪ್ಪ ಚಲವಾದಿ, ಹುಲ್ಲಪ್ಪ ಅಂಟರತಾನಿ ಉಪಸ್ಥಿತರಿದ್ದರು.

## ಬಸವಣ್ಣನವರ ವಿಚಾರಧಾರೆಗಳನ್ನು ಮೈಗೂಡಿಸಿಕೊಂಡಾಗ ಮಾತ್ರ ಜಯಂತಿ ಆಚರಣೆ ಅರ್ಥಪೂರ್ಣ

# ರಾಠೋಡ ಕರಾಟೆ ಪಟುಗಳಿಂದ ಬಸವ ಜಯಂತಿ ಆಚರಣೆ

**ಬಾಗಲಕೋಟೆ :** ರಾಜ್ಯದ ಪ್ರತಿಷ್ಠಿತ ಕರಾಟೆ ಸಂಸ್ಥೆ ರಾಠೋಡ ಮಾರ್ಷಲ್ ಆರ್ಟ್ಸ್ & ಸ್ಕೀಲ್ ಯೂನಿಯನ್ ವತಿಯಿಂದ ಶುಕ್ರವಾರ ಬೆಳಗಿನ ಜಾವ 7–00 ಗಂಟೆಗೆ ಜಿಲ್ಲಾ ಕ್ರೀಡಾಂಗಣದಲ್ಲಿ ವಿಶ್ವಗುರು, ಕರ್ನಾಟಕದ ಸಾಂಸ್ಕೃತಿಕ ನಾಯಕ, ಸಮಾನತೆಯ ಹರಿಕಾರ ಶ್ರೀ ಬಸವೇಶ್ವರರ ಜಯಂತಿ ಪ್ರಯುಕ್ತ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿಲಾಯಿತು. ಈ ಪುಷ್ಪನಮನ ಸಲ್ಲಿಸಿ ಮಾತನಾಡಿದ ಸಂದರ್ಭದಲ್ಲಿ ಕರಾಟೆ ಚೀಫ್ ಕೋಚ್ ಎಸ್.ಆರ್.ರಾಠೋಡ, ವಿಜಯಪುರದ ಬಸವನ ಬಾಗೇವಾಡಿ ತಾಲೂಕಿನ




ಇಂಗಳೇಶ್ವರ ಗ್ರಾಮದಲ್ಲಿ ಹುಟ್ಟಿದ ಬಸವಣ್ಣನವರು ನಮ್ಮ ಬಾಗಲಕೋಟೆಯ ಕೂಡಲ ಸಂಗಮದಲ್ಲಿ ಐಕ್ಯರಾಗಿದ್ದು ಇದು ಅವಳಿ ಜಿಲ್ಲೆಯ ನಮ್ಮವರ ಸೌಭಾಗ್ಯ, 12 ನೇ ಶತಮಾನದಲ್ಲೇ ನಮ್ಮ ನೆಲದಿಂದ ಇಡೀ ವಿಶ್ವಕ್ಕೆ ಪ್ರಜಾಪ್ರಭುತ್ವದ ಪರಿಕಲ್ಪನೆ ನೀಡಿದ ಅವರು ಅಪ್ಪಟ ಸಾಮಾಜಿಕ ಸುಧಾರಕರಾಗಿದ್ದರು. ಪುರುಷ/ಮಹಿಳೆಯರ ನಡುವಿನ ಅಸಮಾನತೆಯನ್ನು ವಿರೋಧಿಸಿ ಎಲ್ಲ ಶರಣ ಬಂಧುಗಳನ್ನು ಸಮಾನವಾಗಿಕಂಡರು. ಇಂದಿಗೂ ಜನರಲ್ಲಿ ಮನೇ ಮಾಡಿರುವ ಮೌಡ್ಯತೆ, ಕಂದಾಚಾರ, ಜಾತೀಯತೆಗಳನ್ನು ಅಂದೇ ಹೋಗಲಾಡಿಸಲು ನಿರಂತರ ಶ್ರಮಿಸಿದ ಇಂತಹ ಅಪ್ಪಟ ಸಾಮಾಜಿಕ ಸಮಾನತೆಯ ಹರಿಕಾರರಾದ ಬಸವಣ್ಣನವರ ವಿಚಾರಧಾರೆಗಳನ್ನು ನಾವೆಲ್ಲರೂ ಮೈಗೂಡಿಸಿಕೊಂಡಾಗ ಮಾತ್ರ ಜಯಂತಿ ಆಚರಣೆ ಅರ್ಥಪೂರ್ಣವಾಗಿರುತ್ತದೆ ಎಂದು ಕ್ರೀಡಾಪಟುಗಳಿಗೆ ತಿಳಿಸಿದರು. ಈ ಸಂದರ್ಭದಲ್ಲಿ ಕ್ರೀಡಾ ಇಲಾಖೆಯ ಸಿಬ್ಬಂದಿಗಳು, ಕರಾಟೆ ಪಟುಗಳು, ಪಾಲಕರು ಇತರೆ ಕ್ರೀಡೆಗಳ ಕ್ರೀಡಾಪಟುಗಳು ಪುಷ್ಪನಮನ ಸಲ್ಲಿಸಿ ಬಸವಣ್ಣನವರಿಗೆ ಜೈಕಾರ ಹಾಕಿದರು.

# ನಗರದಲ್ಲಿ ಬಸವ ಜಯಂತಿಯ ಭವ್ಯ ಶೋಭಾಯಾತ್ರೆ

## ಸಮಾನತೆ ಮೂಲಕ ಕಾಯಕ ತತ್ವ ಸಾರಿದ ಬಸವಣ್ಣ, ಕಾಯಕವೇ ಕೈಲಾಸ ಇಂದಿಗೂ ಪ್ರಸ್ತೂತ, ಚರಂತಿಮಠ







**ಬಾಗಲಕೋಟೆ :** ಎಲ್ಲರಿಗೂ ಸಮಬಾಳು ಎಲ್ಲರಿಗೂ ಸಮಪಾಲು ಎಂದು ಸಾರಿದ ವಿಶ್ವಗುರು ಬಸವಣ್ಣನ ಸಮಾನತೆಯನ್ನು ಮೂಲಕ ಕಾಯಕ ತತ್ವ ಹಾಗೂ ಮಹತ್ವ ಸಾರಿದ್ದು ಬಸವಣ್ಣ ಅವರ ಕಾಯಕವೇ ಕೈಲಾಸ ಇಂದಿಗೂ ಪ್ರಸ್ತೂತ ಎಂದು ಮಾಜಿ ಶಾಸಕ ಡಾ.ವೀರಣ್ಣ ಚರಂತಿಮಠ ಹೇಳಿದರು.

ಅವರು ಬಿ.ವ್ಹಿ.ವ್ಹಿ.ಸಂಘ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ, ಅಕ್ಕನ ಬಳಗ,ಶಿವಾನುಭವ ಸಮಿತಿ,ಶರಣ ಸಾಹಿತ್ಯ ಪರಿಷತ್ತ್ ಸಹಯೋಗದಲ್ಲಿ ವಿಶ್ವಗುರು ಶ್ರೀ ಬಸವ ಜಯಂತಿ ನಿಮಿತ್ಯ ಹಮ್ಮಿಕೊಂಡ ಬಸವಣ್ಣನ ಭಾವ ಚಿತ್ರದ ಭವ್ಯ ಶೋಭಾಯಾತ್ರೆಗೆ ಚಾಲನೆ ನೀಡಿ ಮಾತನಾಡಿದರು.

12ನೇ ಶತಮಾನದಲ್ಲಿಯೇ ಸಮಾಜಿಕ ಕ್ರಾಂತಿಯ ಹರಿಕಾರರಾಗಿ ಅನುಭವ ಮಂಟಪದ ಮುಖಾಂತರ ಪ್ರಜಾಪ್ರಭುತ್ವದ ಕಲ್ಪನೆಯನ್ನು ನೀಡಿ, ಎಲ್ಲ ಸಮುದಾಯದ ಎಲ್ಲ ಜನರಿಗೂ ಸಮಬಾಳು,ಸಮಪಾಲು ಎಂಬ ತತ್ವದಡಿ ಸಮಾನತೆಯನ್ನು ಸಾರುವ ಮೂಲಕ ಕಾಯಕ ಮಹತ್ವವನ್ನು ತಿಳಿಸಿದ್ದು ವಿಶ್ವಗುರು ಬಸವಣ್ಣ, ಅವರ ಕಾಯಕವೇ ಕೈಲಾಸ, ಇಂದಿಗೂ ಪ್ರಸ್ತೂತವಾಗಿದೆ ಎಂದರು.

ಟೀಕಿನಮಠದ ಮಲ್ಲಿಕಾರ್ಜುನ ಶ್ರೀಗಳು, ಬಿಲ್ ಕೆರೂರಿನ ಸಿದ್ದಲಿಂಗ ಶಿವಾಚಾರ್ಯ ಸ್ವಾಮಿಗಳ ಸಾನಿಧ್ಯದಲ್ಲಿ ಜರುಗಿದ ಶೋಭಾಯಾತ್ರೆ, ಬಿ.ವ್ಹಿ.ವ್ಹಿ.ಸಂಘ ಬೀಳೂರ ಗುರುಬಸವ ದೇವಸ್ಥಾನದಿಂದ ಬೃಹತ ಮೆರವಣಿಗೆ ಪ್ರಾರಂಭವಾಗಿ ಕಾಲೇಜು ರಸ್ತೆ, ಬಸವೇಶ್ವರ ವೃತ್ತ, ಮಹಾತ್ಮಗಾಂಧಿ ರಸ್ತೆ, ಪೋಲಿಸ್ ಚೌಕ್, ವಲ್ಲಬಾಯಿ ಚೌಕ್, ಅಡತ್ ಬಜಾರ್,ಟೀಕಿನ ಮಠ, ಚರಂತಿಮಠದ ಶಿವಾನುಭವ ಮಂಟಪ ತಲುಪಿ ಶೋಭಾಯಾತ್ರೆ ಮುಕ್ತಾಯಗೊಂಡಿತು.

ಗಮನ ಸೇಳೆದ ಎತ್ತುಗಳು, ಬಸವಜಯಂತಿ ನಿಮಿತ್ಯ ರೈತಾಪಿ ಜನರು ಎತ್ತುಗಳಿಗೆ ಸ್ನಾನ ಮಾಡಿಸಿ ಅವುಗಳನ್ನು ಶೃಂಗರಿಸಿ ಪೂಜೆ ಸಲ್ಲಿಸಿದ ಸುಮಾರು 25ಕ್ಕೂ ಹೆಚ್ಚು ಜೋಡಿ ಎತ್ತುಗಳನ್ನು ಶೋಭಾಯಾತ್ರೆಯ ಮೆರವಣಿಗೆಯಲ್ಲಿ ಪಾಲ್ಗೊಂಡು ಜನರ ಗಮನ ಸೇಳೆದವು ಮೇರವಣಿಗೆಯಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾಧ್ಯಕ್ಷ ಜಿ.ಎನ್.ಪಾಟೀಲ. ಸಂಘದ ಗೌರವ ಕಾರ್ಯದರ್ಶಿ ಮಹೇಶ ಅಥಣಿ, ಅಶೋಕ ಸಜ್ಜನ ಬೇವೂರ, ಗುರುಬಸವ ಸೂಳಿಬಾವಿ, ಮಹಾಂತೇಶ ಶೆಟ್ಟರ, ಚಂದ್ರಶೇಖರ ಶೇಟ್ಟರ, ಬಸವರಾಜ ಮುಕೂಪಿ, ಬಸವರಾಜ ಯಂಕಂಚಿ, ಪಂಡಿತ ಆರಾಧ್ಯ, ಅಶೋಕ ರೇಣುಕೊಪ್ಪ, ಶರಣಪ್ಪ ಗುಳೆದ, ವಿಜಯಕುಮಾರ ಅಂಗಡಿ, ಕುಮಾರ ಹಿರೇಮಠ, ಚೆನ್ನಯ್ಯ ಬಳೂಲಮಠ, ಪ್ರಕಾಶ ರೇವಡಿಗಾರ, ಎ.ಎಸ್.ಪಾವಟೆ, ಶಿವಾನಂದ ಟವಳಿ, ರಾಜೇಂದ್ರ ತಪಶೆಟ್ಟಿ, ಸಂಗಯ್ಯ ಗಣಾಚಾರಿ, ಸುರೇಶ ಮಜ್ಜಗಿ, ಬಸವರಾಜ ತಡಲಗಿ ಅಕ್ಕನ ಬಳಗ ಸದಸ್ಯರು, ರೈತ ಬಾಂಧವರು ಸೇರಿದಂತೆ ಅನೇಕರು ಭಾಗವಹಿಸಿದ್ದರು.

# ತಿಮ್ಮಾಪುರದಲ್ಲಿ ಹೇಮರೆಡ್ಡಿ ಮಲ್ಲಮ್ಮ ಜಯಂತಿಯ ಆಚರಣೆ

**ಹುನಗುಂದ :** ತಾಲೂಕಿನ ತಿಮ್ಮಾಪುರ ಗ್ರಾಮದಲ್ಲಿ ದಿನಾಂಕ 10 ರಂದು ಶುಕ್ರವಾರ ಮಹಾ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮಳ ಜಯಂತೋತ್ಸವ ನಿಮಿತ್ಯ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಗ್ರಾಮದಲ್ಲಿ, ಜರುಗಿದವು ಜಯಂತೋತ್ಸವದ ನಿಮಿತ್ಯ ಮುಂಜಾನೆ ಮಲ್ಲಮ್ಮನ ಮೂರ್ತಿಗೆ ಅಮರಯ್ಯ ಹಿರೇಮಠ ವೀರಯ್ಯ ಸರಗಣಿ ಚಾರಿ ವೀರಯ್ಯ ಶರಣಯ್ಯ ಹಿರೇಮಠ ರುದ್ರಾಭಿಷೇಕವನ್ನು ನೆರವೇರಿಸಿದರು ನಂತರ ಹೇಮರೆಡ್ಡಿ ಮಲ್ಲಮ್ಮ ದೇವಸ್ಥಾನದ ಕಳಸವನ್ನು ಗ್ರಾಮಸ್ಥರು ವಾದ್ಯ ಮೇಳದೊಂದಿಗೆ ವಿಶ್ವನಾಥ ಚನ್ನಪ್ಪ ಗೌಡ ಹನುಮಗೌಡರ ತೆರಳಿ ಅವರ



ಮನೆಯಿಂದ ದೇವಸ್ಥಾನಕ್ಕೆ ತಂದು ಶಿಖರಕ್ಕೆ ಏರಿಸಲಾಯಿತು ಮಧ್ಯಾಹ್ನ ಜಂಗಮ ಪ್ರಸಾದ ನಂತರ ಅನ್ನಸಂತರ್ಪಣೆ ಜರುಗಿತು

ಭಾವಚಿತ್ರ ಮೆರವಣಿಗೆ: ಅಂದು ಸಾಯಂಕಾಲ ಮಲ್ಲಮ್ಮಳ ಭಾವಚಿತ್ರದ ಮೆರವಣಿಗೆಯನ್ನು ದೇವಸ್ಥಾನದಲ್ಲಿ ಪೂಜೆ ಸಲ್ಲಿಸುವುದರೊಂದಿಗೆ ಪ್ರಾರಂಭಗೊಂಡು ಮಹಿಳೆಯರು ಕಳಸ ಕನ್ನಡಿ ಹಾಗೂ ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ವಿವಿಧ ದೇವಸ್ಥಾನಗಳಿಗೆ ತೆರಳಿ ಪೂಜೆ ಸಲ್ಲಿಸಿದರು

ಹುಚ್ಚೆದ್ದು ಕುಣಿದ ಯುವಕರು ಇಳಕಲ್ ತಾಲೂಕಿನ ಬಲಕುಂದಿ ಹನುಮಾನ್ ಮ್ಯಾಜಿಕಲ್ ಬ್ಯಾಂಡ್ ಸೆಟ್ ವಿವಿಧ ಚಲನಚಿತ್ರ ಜಾನಪದ ಗೀತೆಗಳಿಗೆ ಹಿರಿಯರು ಹಾಗೂ ಯುವಕರು ಹೆಜ್ಜೆ ಹಾಕುತ್ತಿರುವ ದೃಶ್ಯ ಸಾಮಾನ್ಯವಾಗಿ ಕಂಡು ಬಂತು ಮೆರವಣಿಗೆಯಲ್ಲಿ ಗ್ರಾಮದ ಹಿರಿಯರು ಯುವಕರು ಮಹಿಳೆಯರು ಗ್ರಾಮಸ್ಥರು ಪಾಲ್ಗೊಂಡಿದ್ದರು.

# 6ನೇ ತರಗತಿ ಪ್ರವೇಶಕ್ಕಾಗಿ ಅರ್ಜಿ ಆಹ್ವಾನ

**ಬೆಳಗಾವಿ :** 2024–25ನೇ ಸಾಲಿಗೆ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳನ್ನು ಬೆಳಗಾವಿ ಜಿಲ್ಲೆಯ ಪ್ರತಿಷ್ಠಿತ ಶಾಲೆಗಳಾದ ಹುಕ್ಕೇರಿ ತಾಲೂಕಿನ ಡಾ.ಗಂಗಾಧರ ಆಂಗ್ಲ ಮಾಧ್ಯಮ ವಸತಿ ಶಾಲೆ ಶಿರಢಾಣ, ಚಿಕ್ಕೋಡಿ ತಾಲೂಕಿನ ಶ್ರೀ ಮುರಘೇಂದ್ರ ಆಂಗ್ಲ ಮಾಧ್ಯಮ ವಸತಿ ಶಾಲೆ ಕಪ್ಪಣವಾಡಿ, ಗೋಕಾಕ ತಾಲೂಕಿನ ನಾಯಕ ಸ್ಟುಡೆಂಟ ಫಡರೇಶನ್ ಗೋಕಾಕ ಶಾಲೆಗಳಲ್ಲಿ 6ನೇ ತರಗತಿಯ ಪ್ರವೇಶಕ್ಕಾಗಿ ಜಿಲ್ಲೆಗೆ ನಿಗದಿಪಡಿಸಿದ 15 ಅರ್ಹ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲು ಷರತ್ತಿಗೊಳಪಟ್ಟು ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಆಸಕ್ತರು ಅರ್ಜಿ ಸಲ್ಲಿಸುವ ವಿದ್ಯಾರ್ಥಿಯು ಬೆಳಗಾವಿ ಜಿಲ್ಲೆಯವರಾಗಿದ್ದು, ಪರಿಶಿಷ್ಟ ಜಾತಿಗೆ ಸೇರಿರಬೇಕು, ವಿದ್ಯಾರ್ಥಿಗಳ ಕುಟುಂಬದ ವಾರ್ಷಿಕ ಆದಾಯವು ರೂ. 2.50 ಲಕ್ಷ ಮಿತಿಯೊಳಗಿರಬೇಕು, ಅರ್ಜಿ ಸಲ್ಲಿಸುವಾಗ 5ನೇ ತರಗತಿ ಅಂಕಪಟ್ಟಿ ಹಾಗೂ ಜಾತಿ ಮತ್ತು ಆದಾಯ ಪ್ರಮಾಣ (ಆರ್.ಡಿ ಸಂಖ್ಯೆ ಹೊಂದಿರುವ) ಪತ್ರವನ್ನು ಲಗುತ್ತಿಸುವುದು ಹಾಗೂ 5ನೇ ತರಗತಿಯಲ್ಲಿ ತೇರ್ಗಡೆಯಾಗಿ ಶೇ.60 ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದಿರಬೇಕು, ವಿದ್ಯಾರ್ಥಿಗಳನ್ನು ಅರ್ಹತಾ ಪರೀಕ್ಷೆ ಮೂಲಕ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗುವುದು.

ಆಸಕ್ತರು ಅರ್ಜಿಗಳನ್ನು ಮೇ. 21 ಒಳಗಾಗಿ ಸಂಬಂಧಿಸಿದ ತಾಲೂಕುಗಳ ಸಮಾಜ ಕಲ್ಯಾಣ ಇಲಾಖೆಯಲ್ಲಿ ಅರ್ಜಿ ಪಡೆದು ಭರ್ತಿ ಮಾಡಿ ಅರ್ಜಿಯನ್ನು ಸಲ್ಲಿಸಬಹುದು.

ಹೆಚ್ಚಿನ ಮಾಹಿತಿಗಾಗಿ ಬೆಳಗಾವಿಯ ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರು ಅಥವಾ ಸಂಬಂಧಿಸಿದ ತಾಲೂಕುಗಳ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕುಡಿಯುವ ನೀರಿನ ಸಮಸ್ಯೆ ನಿವಾರಣೆ

# ಮಲಪ್ರಭಾ ಕಾಲುವೆಗೆ ಮೇ 23 ರವರೆಗೆ ನೀರು

**ಧಾರವಾಡ :** ಮೇ 14 ರಿಂದ 23 ರವರೆಗೆ ನವಿಲುತೀರ್ಥ ಜಲಾಶಯದಿಂದ ಮಲಪ್ರಭಾ ಹಾಗೂ ನರಗುಂದ ಶಾಖಾ ಕಾಲುವೆ ಮೂಲಕ ನವಲಗುಂದ ಅಣ್ಣಿಗೇರಿ, ಹುಬ್ಬಳ್ಳಿ ಹಾಗೂ ಕುಂದಗೋಳ ತಾಲೂಕು ವ್ಯಾಪ್ತಿಯ 58 ಕುಡಿಯುವ ನೀರಿನ ಕೆರೆಗಳನ್ನು ತುಂಬಿಸಲಾಗುವುದೆಂದು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷರು ಆಗಿರುವ ಜಿಲ್ಲಾಧಿಕಾರಿಗಳಾದ ದಿವ್ಯ ಪ್ರಭು ಅವರು ಹೇಳಿದರು.

ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಈ ಕುರಿತು ಜರುಗಿದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡುತ್ತ ಬರಗಾಲದ ನಡುವೆ ಬಿಸಿಲಿನ ತಾಪ ಹೆಚ್ಚಾಗುತ್ತಿದ್ದು, ಜನ, ಜಾನುವಾರುಗಳಿಗೆ ಕುಡಿಯುವ ನೀರಿಗೆ ತೊಂದರೆಯಾಗದಂತೆ 10 ದಿನಗಳ ಕಾಲ ನಿರಂತರ ಮಲಪ್ರಭಾ ಬಲದಂಡೆ ಕಾಲುವೆಗಳಿಂದ 0.5 ಟಿಎಂಸಿ (600 ಕ್ಯೂಸೆಕ್ಸ್) ನೀರನ್ನು ನಾಲ್ಕು ತಾಲೂಕುಗಳ 58 ಕೆರೆಗಳಿಗೆ ಬಿಡಲಾಗುವುದು.

ನವಲಗುಂದ ತಾಲೂಕಿನ 37 ಕೆರೆ, ಅಣ್ಣಿಗೇರಿಯ 13, ಹುಬ್ಬಳ್ಳಿಯ 7 ಹಾಗೂ ಕುಂದಗೋಳದ 3 ಪೂರಕ ಸಂಗ್ರಹಣಾ ಕೆರೆಗಳನ್ನು ಭರ್ತಿ ಮಾಡಲಾಗುವುದು ಆಯಾ ತಾಲೂಕಿನ ತಹಶೀಲ್ದಾರರು, ತಾಲೂಕು ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿ, ನೀರಾವರಿ ಇಲಾಖೆ ಎಇಇಗಳು ಕ್ರೀಯಾಶೀಲರಾಗಿ ನಿಗಾ ವಹಿಸಿತಕ್ಕದ್ದು ಎಂದು ಅವರು ತಿಳಿಸಿದರು.

ಕಾಲುವೆಗೆ ಹರಿಸಲಾದ ನೀರು ಕೇವಲ ಕುಡಿಯುವ ನೀರಿಗೆ ಮಾತ್ರ ಬಳಕೆಯಾಗತಕ್ಕದ್ದು ಕುಡಿಯುವ ನೀರು ಹೊರತುಪಡಿಸಿ ಇನ್ಯಾವುದೇ ಉದ್ದೇಶಕ್ಕಾಗಿ ಬಳಕೆಯಾಗದಂತೆ ಸಂಬಂಧಿಸಿದ ಅಧಿಕಾರಿಗಳು ತೀವ್ರ ನಿಗಾ ವಹಿಸತಕ್ಕದ್ದು ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು. ನೀರಾವರಿ ಇಲಾಖೆ, ಕಂದಾಯ ಇಲಾಖೆ, ಹೆಸ್ಕಾಂ,




ಪೋಲಿಸ್ ಹಾಗೂ ಗ್ರಾಮೀಣ ಕುಡಿಯುವ ನೀರು ವಿಭಾಗಗಳ ಅಧಿಕಾರಿಗಳು ಹಾಗೂ ಸಿಬ್ಬಂದಿಗಳ ಮೂರು ತಂಡಗಳನ್ನು ಮೂರು ಶಿಫ್ಟಗಳಲ್ಲಿ ಕಾರ್ಯನಿರ್ವಹಿಸಲು ಸೂಚಿಸಲಾಯಿತು. ಎಲ್ಲರೂ ಒಬ್ಬರಿಗೊಬ್ಬರು ಸಹಕಾರದೊಂದಿಗೆ ನಾಲ್ಕು ತಾಲೂಕುಗಳ 7 ಉಪವಿಭಾಗಗಳ ಸುಮಾರು 90 ಕಿ.ಮೀ. ವ್ಯಾಪ್ತಿಯ ಕಾಲುವೆ ಸುತ್ತ ಯಾವುದೇ ತೊಂದರೆಯಾಗದಂತೆ ನಿಗಾ ವಹಿಸಿ ಕ್ರಿಯಾಶೀಲರಾಗಿ ಕೆಲಸ ಮಾಡತಕ್ಕದ್ದು ಎಂದರು.

ಕಾಲುವೆ ಸುತ್ತಲಿನ 66 ಗ್ರಾಮಗಳಲ್ಲಿ 144 ಸೆಕ್ಷನ್ ಆದೇಶ ಹೊರಡಿಸಲಾಗುವುದೆಂದು ಜಿಲ್ಲಾಧಿಕಾರಿಗಳು ತಿಳಿಸಿದರು. ನೀರು ಹರಿಸುವ ಸಮಯದಲ್ಲಿ ಆಯಾ ವಿಭಾಗಗಳಲ್ಲಿ ಪೋಲಿಸ ಸಿಬ್ಬಂದಿಯನ್ನು ನಿಯೋಜಿಸಲಾಗಿದೆಂದು ಪೋಲಿಸ ವರಿಷ್ಠಾಧಿಕಾರಿ ಡಾ. ಗೋಪಾಲ ಬ್ಯಾಕೋಡ ತಿಳಿಸಿದರು.

ಬರಗಾಲ ಸ್ಥಿತಿಯಾಗಿರುವುದರಿಂದ 58 ಕೆರೆಗಳನ್ನು ಸಂಪೂರ್ಣ ಭರ್ತಿ ಮಾಡಲಾಗುವುದು. ಕುಡಿಯುವ ನೀರು ಹೊರತುಪಡಿಸಿ ಬೇರೆ ಉದ್ದೇಶಕ್ಕೆ ನೀರು ಬಳಕೆಯಾಗದಂತೆ ಆಯಾ ವ್ಯಾಪ್ತಿಯ ನೀರಾವರಿ ಇಲಾಖೆಯ ಸಹಾಯಕ ಅಭಿಯಂತರರು, ಪಿಡಿಓ ಗ್ರಾಮಲೆಕ್ಕಿಗರು, ಪೋಲಿಸ್ ಸಿಬ್ಬಂದಿ ತಮ್ಮ ವ್ಯಾಪ್ತಿಯಲ್ಲಿ ಚುರುಕಾಗಿ ಕಾರ್ಯನಿರ್ವಹಿಸಬೇಕೆಂದರು. ಹೆಸ್ಕಾಂ ಅಧಿಕಾರಿಗಳು ನೀರು ಹರಿಸುವ ಸಮಯದಲ್ಲಿ ಎಲ್ಲ ಐಪಿಎಸ್‌ಗಳ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸತಕ್ಕದ್ದು, ಸೆಕ್ಷನ್ ಅಧಿಕಾರಿಗಳನ್ನು ಇದಕ್ಕೆ ನೇಮಿಸಲಾಗುವುದೆಂದು ಹೆಸ್ಕಾಂ ಕಾರ್ಯನಿರ್ವಾಹಕ ಅಭಿಯಂತರ ಕಿರಣ ಕುಮಾರ ಅವರು ತಿಳಿಸಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಗೀತಾ ಸಿ.ಡಿ, ಉಪವಿಭಾಗಾಧಿಕಾರಿ ಶಾಲಂ ಹುಸೇನ, ಜಿಲ್ಲಾ ಪಂಚಾಯತ ಉಪಕಾರ್ಯದರ್ಶಿ ವಿಜಯಕುಮಾರ ಅಜೂರ, ಮಲಪ್ರಭಾ ಯೋಜನಾವಲಯದ ಸೂಪರಿಂಟೆಂಡೆಂಟ್ ಇಂಜಿನೀಯರ ಡಾ. ಎಸ್.ಬಿ.ಮಲ್ಲಿಗವಾಡ, ಬ್ಯಾಹಟ್ಟಿ ವಿಭಾಗದ ಇಇ ಮನೋಹರ ಬಿಸ್ನಾಳ, ಗ್ರಾಮೀಣ ಕುಡಿಯುವ ನೀರು ಸರಬರಾಜು ವಿಭಾಗದ ಇಇ ಆರ್.ಎಂ. ಸೊಪ್ಪಿಮಠ ಸೇರಿದಂತೆ ವಿವಿಧ ಅಧಿಕಾರಿಗಳು ಉಪಸ್ಥಿತರಿದ್ದರು.

# ಕರ್ನಾಟಕದಲ್ಲಿ ಮಹಾರಾಷ್ಟ್ರ ಮಾದರಿ ಆಪರೇಷನ್: ಶಿಂಧೆ

**ಮುಂಬೈ :** ಲೋಕಸಭಾ ಚುನಾವಣೆಯ ನಂತರ ಕರ್ನಾಟ ಕದಲ್ಲಿ ಮಹಾರಾಷ್ಟ್ರ ಮಾದರಿಯಲ್ಲಿ ಆಪರೇಷನ್ ಆಗುತ್ತದೆ ಎಂದು ಮಹಾರಾಷ್ಟ್ರ ಮುಖ್ಯಮಂತ್ರಿ ಏಕ್‌ನಾಥ್ ಶಿಂಧೆ ಹೇಳುವ ಮೂಲಕ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಪತನವಾಗಬಹುದು ಎಂಬ ಸುಳಿವು ನೀಡಿದ್ದಾರೆ.

ಲೋಕಸಭಾ ಚುನಾವಣೆಯ ಫಲಿತಾಂಶದ ನಂತರ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರವನ್ನು ಪತನಗೊಳಿಸುವ ಪ್ರಯತ್ನಗಳು ನಡೆಯಲಿವೆ ಎಂಬ ಸುದ್ದಿಗಳು ಹರಿದಾಡುತ್ತಿರುವಾಗಲೇ ಮಹಾರಾಷ್ಟ್ರ ಮುಖ್ಯಮಂತ್ರಿ ಏಕ್‌ನಾಥ್ ಶಿಂಧೆ ಅವರು ಕರ್ನಾಟಕ ಸರ್ಕಾರ ಪತನಕ್ಕೆ ತೆರೆಮರೆಯಲ್ಲಿ ಕಸರತ್ತು ನಡೆದಿದೆ ಎಂಬ ಸ್ಫೋಟಕ ಹೇಳಿಕೆಯನ್ನು ನೀಡಿದ್ದಾರೆ.

ಮಹಾರಾಷ್ಟ್ರದ ಸತಾರಾದಲ್ಲಿ ಮಾತನಾಡಿದ ಶಿಂಧೆ ಅವರು ನಾನು ಇತ್ತೀಚೆಗೆ ಕರ್ನಾಟಕದ ಒಂದು ಸಭೆಗೆ ತೆರಳಿದ್ದೆ. ಕರ್ನಾಟಕದಲ್ಲಿಯೂ ನಾಥ ಆಪರೇಷನ್‌ಮಾಡುವುದಿದೆ ಎಂದು ಅಲ್ಲಿನ ನಾಯಕರು ಹೇಳಿದರು. ನಾಥ ಆಪರೇಷನ್ ಎಂದರೆ ಏನು ಅಂತ ಕೇಳಿದೆ. ನೀವು ಮಹಾರಾಷ್ಟ್ರ ಘಟಬಂಧನ ಸರ್ಕಾರ ಪತನ ಮಾಡಿದ್ದೀರಿ. ಹೀಗಾಗಿ ನಿಮ್ಮ ಅನುಭವ ನಮಗೆ ಬಹಳ ಅವಶ್ಯವಿದೆ. ಇದುವೇ ನಾಥ ಆಪರೇಷನ್ ಎಂದು ಹೇಳಿದರು. ಆಗ ನಾನು ಖಂಡಿತವಾಗಿ ನಾನು ಬರುತ್ತೇನೆ ಎಂದು ಹೇಳಿದ್ದೇನೆ ಎಂದರು.

ಕರ್ನಾಟಕದಲ್ಲಿ ಬಹಳ ದಿನ ಕಾಂಗ್ರೆಸ್ ಸರ್ಕಾರ



ಇರುವುದಿಲ್ಲ. ಲೋಕಸಭಾ ಚುನಾವಣೆ ನಂತರ ಕರ್ನಾಟಕಕ್ಕೆ ಬರುವಂತೆ ಕರ್ನಾಟಕದ ನಾಯಕರು ಆಹ್ವಾನ ನೀಡಿದ್ದಾರೆ ಎಂದು ಶಿಂಧೆ ಸತಾರದ ಸಭೆಯಲ್ಲಿ ಹೇಳಿದರು.

ಮಹಾರಾಷ್ಟ್ರ ಮುಖ್ಯಮಂತ್ರಿಗಳ ಈ ಹೇಳಿಕೆಗೆ ಕರ್ನಾಟಕ ರಾಜಕೀಯದಲ್ಲಿ ಚರ್ಚೆಗೆ ಗ್ರಾಸವಾಗಿದ್ದು, ಕಾಂಗ್ರೆಸ್ ಸರ್ಕಾರ ಪತನಗೊಳಿಸಲು ಬಿಜೆಪಿ–ಜೆಡಿಎಸ್ ನಾಯಕರು ಆಪರೇಷನ್ ನಡೆಸಲಿದ್ದಾರೆ ಎಂಬ ಸುಳಿವನ್ನು ಏಕನಾಥ್‌ಶಿಂಧೆ ನೀಡಿರುವುದರಿಂದ ಲೋಕಸಭಾ ಚುನಾವಣಾ ಫಲಿತಾಂಶದ ನಂತರ ರಾಜ್ಯದಲ್ಲಿ ರಾಜಕೀಯ ಚಟುವಟಿಕೆಗಳು ಯಾವ ದಿಕ್ಕಿನಲ್ಲಿ ಸಾಗಲಿದೆ ಎಂಬುದು ಕುತೂಹಲ ಮೂಡಿಸಿದೆ.

**"SIHI KAHI"** Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State